10 ಸೆಪ್ಟೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 182 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಹಾಂಗ್ ಕಾಂಗ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್‌ಶೆಟ್ಟಿ ಅವರು ಶುಭಾರಂಭ ಮಾಡಿದರು.



ಸಾವಿಗೆ ಶರಣಾಗಿ ಸಾಧಿಸುವುದೇನಿಲ್ಲ, ಬದುಕಿ ಜಯಿಸೋಣ » 2



ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ : ಸಿದ್ಧತೆಗೆ ಕ್ರಮ ವಹಿಸಿ » 3



ಸಂಘರ್ಷದ ಬಳಿಕ ಸಹಜ ಸ್ಥಿತಿಯತ್ತ ಮದ್ದೂರು » 4

# ರಾಧಾಕೃಷ್ಣನ್ 15ನೇ ಉಪ ರಾಷ್ಟ್ರಪತಿ

## 452 ಮೊದಲ ಪ್ರಾಶಸ್ತ್ಯದ ಮತ ಪಡೆದು ಗೆಲುವು| 300 ಮತ ಪಡೆದು ಪರಾಭವಗೊಂಡ ಮೈತ್ರಿಕೂಟ ಅಭ್ಯರ್ಥಿ ಸುದರ್ಶನ ರೆಡ್ಡಿ

• ಪ್ರಜೋದಯ ವರದಿ

**ನವದೆಹಲಿ:** ಆಡಳಿತಾರೂಢ ಎನ್‌ಡಿಎ ಅಭ್ಯರ್ಥಿ, ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ದೇಶದ 15ನೇ ಉಪ ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದಾರೆ.

ಮಂಗಳವಾರ ನಡೆದ ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಅವರು 452 ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಪ್ರತಿಸ್ಪರ್ಧಿ ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿ ನಿವೃತ್ತ ನ್ಯಾಯಮೂರ್ತಿ ಸುದರ್ಶನ ರೆಡ್ಡಿ ಅವರು 300 ಮೊದಲ ಪ್ರಾಶಸ್ತ್ಯದ ಮತ ಗಳನ್ನು ಪಡೆದು ಪರಾಭವಗೊಂಡರು.

ಫಲಿತಾಂಶ ಪ್ರಕಟಿಸಿದ ರಾಜ್ಯಸಭಾ ಪ್ರಧಾನ ಕಾರ್ಯದರ್ಶಿ ಪಿ.ಸಿ.ಮೋದಿ ಅವರು, ರಾಧಾಕೃಷ್ಣನ್ ಅವರು ವಿರೋಧ ಪಕ್ಷದ ಅಭ್ಯರ್ಥಿ ವಿಶ್ರಾಂತ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರ ವಿರುದ್ಧ 152 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆಂದು ಘೋಷಿಸಿದರು. ಜಗದೀಪ್ ಧನಕರ್ ರಾಜೀನಾಮೆ ಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆದಿತ್ತು.



ಮೊದಲು ಎನ್‌ಡಿಎ ಅಭ್ಯರ್ಥಿಯಾಗಿ ಸಿ.ಪಿ.ರಾಧಾಕೃಷ್ಣನ್ ಅವರ ಹೆಸರನ್ನು ಘೋಷಿಸಲಾಯಿತು. ತಮ್ಮ ಅಭ್ಯರ್ಥಿಗೆ ಬೆಂಬಲ ನೀಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ವಿಪಕ್ಷಗಳಿಗೆ ಮನವಿ ಮಾಡಿದ್ದರು. ಆದರೆ, ಇಂಡಿಯಾ ಬಣದ ಜಂಟಿ ಅಭ್ಯರ್ಥಿಯಾಗಿ ಸುದರ್ಶನ್ ರೆಡ್ಡಿ ಅವರನ್ನು ಕಣಕ್ಕಿಳಿಸಿದ್ದರು.

ಉಪರಾಷ್ಟ್ರಪತಿ ಆಯ್ಕೆಗೆ ಬೆಳಿಗ್ಗೆ 10 ಗಂಟೆ ಸಂಜೆ 5 ಗಂಟೆವರೆಗೆ ಮತದಾನ ಪ್ರಕ್ರಿಯೆ ನಡೆಯಿತು. ಪ್ರಧಾನಿ ನರೇಂದ್ರ ಮೋದಿ ಮೊದಲ ಚಲಾಯಿಸಿದ್ದರು. ಬಳಿಕ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಅಮಿತ್ ಶಾ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸೇರಿ ಲೋಕಸಭೆ ಹಾಗು ರಾಜ್ಯಸಭೆ ಸದಸ್ಯರು ತಮ್ಮ ಹಕ್ಕು ಚಲಾಯಿಸಿದರು. ಬಳಿಕ ಮತ ಎಣಿಕೆ ಕಾರ್ಯ ಶೀಘ್ರದಲ್ಲೇ ಆರಂಭವಾಯಿತು.

ರಾಧಾಕೃಷ್ಣನ್ ಅವರನ್ನು ಭಾರತೀಯ ಜನತಾ ಪಕ್ಷ (ಬಿಜೆಪಿ), ತೆಲುಗು ದೇಶಂ ಪಕ್ಷ (ಟಿಡಿಪಿ), ಜನತಾದಳ ಯುನೈಟೆಡ್ (ಜೆಡಿಯು), ಶಿವಸೇನೆ, ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ), ಅಸ್ಸಾಂ ಗಣ ಪರಿಷತ್ (ಎಜಿಪಿ), ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್), ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ), ಜನತಾದಳ ಜಾತ್ಯಾತೀತ (ಜೆಡಿಎಸ್) ಮತ್ತು ಆಲ್ ಇಂಡಿಯಾ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ (ಎಐಎಡಿಎಂಕೆ) ಸೇರಿ ಇತರರು ಬೆಂಬಲಿಸಿದರು. ಜಗನ್ ಮೋಹನ್ ರೆಡ್ಡಿ ಅವರ ವೈಎಸ್‌ಆರ್‌ಸಿಪಿ ಕೂಡ ರಾಧಾಕೃಷ್ಣನ್ ಪರವಾಗಿ ಮತ ಚಲಾಯಿಸಿತು.

ಮತ್ತೊಂದೆಡೆ, ಸುದರ್ಶನ್ ರೆಡ್ಡಿ ಅವರಿಗೆ ಕಾಂಗ್ರೆಸ್, ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ), ಸಮಾಜವಾದಿ ಪಕ್ಷ (ಎಸ್‌ಪಿ), ತೃಣಮೂಲ ಕಾಂಗ್ರೆಸ್ (ಟಿಎಂಸಿ), ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ), ಆಮ್ ಆದ್ಮಿ ಪಕ್ಷ (ಎಎಪಿ), ರಾಷ್ಟ್ರೀಯ ಜನತಾದಳ (ಆರ್‌ಜೆಡಿ), ಶಿವಸೇನೆ (ಯುಬಿಟಿ), ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷ (ಎಸ್‌ಪಿ) ಮತ್ತು ಎಡ ಪಕ್ಷಗಳು ಸೇರಿದಂತೆ ಇತರ ಪಕ್ಷಗಳು ಬೆಂಬಲ ನೀಡಿದವು. ಬಿಜು ಜನತಾದಳ (ಬಿಜೆಡಿ), ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಮತ್ತು ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಸೇರಿ ಹಲವಾರು ಪಕ್ಷಗಳು ಮತದಾನ ದಿಂದ ದೂರ ಉಳಿದವು. ಸಿ.ಪಿ ರಾಧಾಕೃಷ್ಣನ್ 437 ಮತಗಳನ್ನು ಪಡೆಯುವ ನಿರೀಕ್ಷೆ ಇತ್ತು. ಆದರೆ, 452 ಮತಗಳನ್ನು ಪಡೆದರು.

### ಉಪ ರಾಷ್ಟ್ರಪತಿ ಹಿನ್ನಲೆ

ತಮಿಳುನಾಡಿನ ಹಿರಿಯ ಬಿಜೆಪಿ ನಾಯಕ ಮತ್ತು ಎರಡು ಬಾರಿ ಲೋಕಸಭಾ ಸಂಸದರಾಗಿದ್ದ ರಾಧಾಕೃಷ್ಣನ್ ಅವರು ಈಗ ದೇಶದ 15ನೇ ಉಪರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಉಪ ರಾಷ್ಟ್ರಪತಿಗಳು ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರೂ ಆಗಿರುತ್ತಾರೆ. ಅಕ್ಟೋಬರ್ 20, 1957 ರಂದು ತಮಿಳುನಾಡಿನ ಕೊಂಗು ಪ್ರದೇಶದ ತಿರುಪ್ಪೂರಿನಲ್ಲಿ ಜನಿಸಿದ ರಾಧಾಕೃಷ್ಣನ್ ಅವರು, 17ನೇ ವಯಸ್ಸಿನಲ್ಲಿಯೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್ ಎಸ್‌ಎಸ್) ಸೇರಿದರು. ನಂತರ ಅವರು ಭಾರತೀಯ ಜನತಾ ಪಕ್ಷ (ಬಿಜೆಪಿ) ಕಾರ್ಯಕರ್ತರಾಗಿ, ತಮಿಳುನಾಡಿನ ಬಿಜೆಪಿ ಅಧ್ಯಕ್ಷರಾಗಿ, ಎರಡು ಬಾರಿ ಸಂಸದರಾಗಿ, ಆನಂತರ ಜಾರ್ಖಂಡ್ ಸೇರಿ ಅನೇಕ ರಾಜ್ಯಗಳ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

### 15 ಮತಗಳು ಅಮಾನ್ಯ

ಸಂಸತ್ತಿನಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಸೇರಿ ಒಟ್ಟು 788 ಸಂಸದರಿದ್ದಾರೆ. ಪ್ರಸ್ತುತ ಎರಡೂ ಸದನಗಳಲ್ಲಿ 7 ಸ್ಥಾನಗಳು ಖಾಲಿ ಇರುವ ಕಾರಣ ಒಟ್ಟು 781 ಸಂಸದರು ಮತ ಚಲಾಯಿಸಬೇಕಾಗಿತ್ತು. ಆದರೆ, ಅದರಲ್ಲಿ ಬಿಆರ್‌ಎಸ್‌ನ 4, ಬಿಜೆಡಿಯ 7, ಅಕಾಲಿ ದಳದ 3 ಮತ್ತು 1 ಸ್ವತಂತ್ರ ಸಂಸದರು ಮತದಾನದಿಂದ ದೂರ ಉಳಿದಿದ್ದರು. ಹೀಗಾಗಿ ಒಟ್ಟು 767 ಸಂಸದರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ಅದರಲ್ಲಿ 15 ಮತಗಳನ್ನು ಅಮಾನ್ಯವೆಂದು ಘೋಷಿಸಲಾಯಿತು. 752 ಮತಗಳನ್ನು ಮಾತ್ರವೇ ಮಾನ್ಯ ಮಾಡಿ ಮತ ಎಣಿಕೆಗೆ ಪರಿಗಣಿಸಲಾಯಿತು.

# ವಿಧಾನ ಪರಿಷತ್ ಸದಸ್ಯರಿಗೂ ಅನುದಾನ

• ಪ್ರಜೋದಯ ವರದಿ



**ಬೆಂಗಳೂರು:** ಶಾಸಕರು ತಮ್ಮ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಬಜೆಟ್‌ನಲ್ಲಿ ಮೀಸಲಿರಿಸಿರುವ 8 ಸಾವಿರ ಕೋ. ರೂ.ಗಳಲ್ಲಿ ವಿಧಾನ ಪರಿಷತ್ ಸದಸ್ಯರಿಗೂ ಅನುದಾನ ಹಂಚಿಕೆ ಮಾಡುವ ಕುರಿತು ಪರಿಶೀಲಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದಾರೆ.

ಆಡಳಿತ ಪಕ್ಷದ ವಿಧಾನ ಪರಿಷತ್ ಸದಸ್ಯರ ಜೊತೆ ಮಂಗಳವಾರ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ಶಾಸಕರಿಗೆ ನೀಡಿದಂತೆ ತಮಗೂ ಕ್ಷೇತ್ರದ ಅಭಿವೃದ್ಧಿಗೆ 50 ಕೋ.ರೂ. ವಿಶೇಷ ಅನುದಾನ ನೀಡುವಂತೆ ವಿಧಾನ ಪರಿಷತ್ ಸದಸ್ಯರು ಬೇಡಿಕೆ ಸಲ್ಲಿಸಿದ್ದಾರೆ. ಸಚಿವರ ನಡೆ ವಿರುದ್ಧ ಆಡಳಿತ ಪಕ್ಷದ ಪರಿಷತ್ ಸದಸ್ಯರ ತೀವ್ರ ಅಸಮಾಧಾನ ಹೊರ ಹಾಕಿದ್ದಾರೆ. ಸಚಿವರು ನಮ್ಮ ಪತ್ರಗಳಿಗೆ ಮಾನ್ಯತೆ ನೀಡುತ್ತಿಲ್ಲ. ಭೇಟಿಗೆ ಅವಕಾಶ ನೀಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ದೂರವಾಣಿ ಕರೆಯನ್ನೂ ಸ್ವೀಕರಿಸುವುದಿಲ್ಲವೆಂದು ಬೇಸರ ತೋಡಿಕೊಂಡಿದ್ದಾರೆ. ತಮ್ಮ ಅಹವಾಲುಗಳಿಗೆ ಸ್ಪಂದಿಸುವಂತೆ ಸಚಿವರಿಗೆ ಸೂಚನೆ ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆಂದು ಗೊತ್ತಾಗಿದೆ.

ಈಗ ಒಬ್ಬರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದೆ. ಮುಂದಿನ ಸಚಿವ ಸಂಪುಟ ಪುನರ್ ರಚನೆಯ ಸಂದರ್ಭದಲ್ಲಿ ಮೂವರು ಪರಿಷತ್ ಸದಸ್ಯರಿಗೆ ಸಚಿವ ಸ್ಥಾನ ನೀಡಬೇಕು. ಜೊತೆಗೆ, ಶಾಸಕರಿಗೆ ನೀಡಿರುವ ಶಿಷ್ಟಾಚಾರವನ್ನು ನಮಗೂ ಅನ್ವಯಿಸಬೇಕೆಂದೂ ಬೇಡಿಕೆ ಇಟ್ಟಿದ್ದಾರೆಂದು ತಿಳಿದು ಬಂದಿದೆ.

ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ, ವಿಶೇಷ ಅನುದಾನ ನೀಡಬೇಕೆಂಬ ಪರಿಷತ್ ಸದಸ್ಯರ ಬೇಡಿಕೆಯನ್ನು ಪರಿಶೀಲಿಸಲಾಗುವುದು. ಈ ಹಿಂದೆ ಜಿಲ್ಲಾ ಶಾಸಕರೊಂದಿಗೆ ಸಭೆ ನಡೆಸಿದಂತೆ, ಬೆಂಗಳೂರು ನಗರದ ಶಾಸಕರೊಂದಿಗೆ ಬುಧವಾರ ಸಭೆ ನಡೆಸಲಾಗುವುದು ಎಂದರು.

ಪರಿಷತ್ ಸಭಾ ನಾಯಕ ಎನ್.ಎಸ್ .ಬೋಸರಾಜು ಮಾತನಾಡಿ, ಪರಿಷತ್ ಸದಸ್ಯರು ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟ ಅಹವಾಲುಗಳನ್ನು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದಾರೆ. ಸಮಸ್ಯೆಗಳ ಬಗ್ಗೆ ಚರ್ಚಿಸಿ ಬಗೆಹರಿಸುವ ಆಶ್ವಾಸನೆಯನ್ನು ಅವರು ನೀಡಿದ್ದಾರೆಂದರು.

ಸಚಿವರ ವಿರುದ್ಧ ಪರಿಷತ್ ಸದಸ್ಯರ ಅಸಮಾಧಾನದ ಬಗ್ಗೆ ಕೇಳಿದ ಪ್ರಶ್ನೆಗೆ, ಅದೆಲ್ಲರದರ ಬಗ್ಗೆ ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿಯ ಗಮನಕ್ಕೂ ತಂದಿದ್ದಾರೆ. ಆ ರೀತಿಯ ದೂರಿನ ಚರ್ಚೆ ಮಾಡುತ್ತೇವೆ. ಅನುದಾನ ಹಂಚಿಕೆ ಬಗ್ಗೆ ಈಗಾಗಲೇ ಎಲ್ಲಾ ಸದಸ್ಯರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದಾರೆಂದರು.

# ಶೀಟ್ ಅಳವಡಿಕೆ ಕಾಮಗಾರಿ ಸ್ಥಗಿತಕ್ಕೆ ಸೂಚನೆ



• ಪ್ರಜೋದಯ ವರದಿ

**ಹಾಸನ:** ರೈಲ್ವೆ ಇಲಾಖೆಯಿಂದ ರಾಜಘಟ್ಟ ಬಳಿ ನಿರ್ಮಾಣ ಮಾಡುತ್ತಿರುವ ಲೋಡಿಂಗ್ ಲಾರಿಗಳು ನಿಲ್ಲಲು ಶೀಟ್ ಅಳವಡಿಕೆ ಕಾಮಗಾರಿಯಿಂದ ಸ್ಥಳೀಯರಿಗೆ ಸಮಸ್ಯೆ ಉಂಟಾಗುತ್ತಿರುವುದರಿಂದ ತಕ್ಷಣ ಕಾಮಗಾರಿಯನ್ನು ನಿಲ್ಲಿಸುವಂತೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಸೂಚಿಸಿದರು.

ತೊಂದರೆಯಾಗುತ್ತಿರುವ ಬಗ್ಗೆ ಸ್ಥಳೀಯರಿಂದ ದೂರುಗಳು ಕೇಳಿ ಬಂದ ಹಿನ್ನಲೆ ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಮಾತನಾಡಿದ ಸ್ಥಳೀಯರು, ರೈಲ್ವೆ ಇಲಾಖೆ ಕಾಮಗಾರಿಯಿಂದ ಸುತ್ತಮುತ್ತಲ 8 ಹಳ್ಳಿಗಳಿಗೆ ತೊಂದರೆಯಾಗುತ್ತಿದೆ. ಕೈಗಾರಿಕಾ ಪ್ರದೇಶಕ್ಕೆ ತೆರಳುವ ಕಾರ್ಮಿಕರು ನಗರ ಪ್ರದೇಶ ಹಾಗು ಬೈಪಾಸ್ ರಸ್ತೆಗೆ ದಿನನಿತ್ಯ ಓಡಾಡುವ ವಾಹನಗಳಿಗೆ, ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂದು ಆರೋಪಿಸಿದರು.

1ನೇ ವಾರ್ಡ್ ಪಾಲಿಕೆ ಸದಸ್ಯ ರಕ್ಷಿತ್ ಮಾತನಾಡಿ, ಇದು ಸಾವಿರಾರು ಜನರು ಓಡಾಡುವ ರಸ್ತೆ. ಹಲವು ಲಾರಿಗಳು ಓಡಾಡುವುದರಿಂದ

» ನಾಲ್ಕನೇ ಪುಟದಲ್ಲಿ

# ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ :** ಅಂತರ್ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸೆ.15 ರಂದು ನಡೆಸುವ ಅಂಗವಾಗಿ ತಾಲ್ಲೂಕಿನ ಎಲ್ಲಾ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಸೆ.11 ರಂದು ಡಾ|| ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ ಚಿತ್ರಕಲಾ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಹಾಗೂ ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಭಾಷಣ ಸ್ಪರ್ಧೆಯನ್ನು ಆಯೋಜಿಸಿರುವುದರಿಂದ ತಾಲ್ಲೂಕಿನ ಎಲ್ಲಾ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಗಡುವು ಮುಗಿದರೂ ಪೂರ್ಣವಾಗದ ಹೆದ್ದಾರಿ ಕಾಮಗಾರಿ

## ವಾಹನ ಸವಾರರ ಪಾಡು ಹೇಳತೀರದು | ವಿಳಂಬಕ್ಕೆ ಅನುದಾನ ಕೊರತೆ ನೆಪ

• ಪ್ರಜೋದಯ ವರದಿ

**ಹಾಸನ:** ಸುಗಮ ಸಂಚಾರ, ಅಪಘಾತ ನಿಯಂತ್ರಣ ಹಾಗು ಪ್ರಯಾಣದ ಅಂತರ ಕಡಿಮೆ ಮಾಡುವ ಉದ್ದೇಶದಿಂದ ಕೈಗೊಂಡ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿದ್ದು, ಪ್ರಯಾಣಿಕರ ಪಾಡು ಹೇಳತೀರದಾಗಿದೆ.

ಭೂಸ್ವಾಧೀನ ವಿಳಂಬ, ಪರಿಹಾರ ವಿತರಣೆಯಲ್ಲಿ ತಾರತಮ್ಯ, ಗುತ್ತಿಗೆದಾರರ ನಿರ್ಲಕ್ಷ್ಯ ಹೀಗೆ ಅನೇಕ ಕಾರಣಗಳಿಂದ ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಲು ಸಾಧ್ಯವಾಗುತ್ತಿಲ್ಲ. ಬಿಳಿಕೆರೆಯಿಂದ ಚಿಕ್ಕಮಗಳೂರಿಗೆ ನಾಲ್ಕು ಪಥದ ರಸ್ತೆ ಕಾಮಗಾರಿಯನ್ನು 2023ರಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕೆಲವು ಕಡೆ ರಸ್ತೆ ವಿಸ್ತರಣೆ, ಡಾಂಬರೀಕರಣ ಮಾಡಲಾಗಿದೆ. ಚನ್ನರಾಯಪಟ್ಟಣ-ಹಾಸನ ಎನ್‌ಹೆಚ್-75ರ ಬೈಪಾಸ್ ಕಾಮಗಾರಿ, ಹಾಸನ-ಮಾರನಹಳ್ಳಿ ವಿಭಾಗದ ಎನ್‌ಹೆಚ್-75, ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲಿನಲ್ಲಿ ಹೆಚ್ಚುವರಿ ಭೂಮಿ ಅಗತ್ಯ, ಬೇಲೂರು-ಹಾಸನ ವಿಭಾಗದ 4 ಪಥ ಅಗಲೀಕರಣ, ತುಮಕೂರು- ಶಿವಮೊಗ್ಗಾ ಎನ್‌ಹೆಚ್-69 ಕಾಮಗಾರಿಗೆ ಅರಸೀಕೆರೆ ತಾಲ್ಲೂಕಿನ ಬೆಂಡೇಕೆರೆ ಬಳಿ 3 ಎಕರೆ ಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಕಾಮಗಾರಿ ಸಕಾಲಕ್ಕೆ ಆಗದೆ ತೊಂದರೆಯಾಗಿದೆ.



### ಪರಿಹಾರಕ್ಕಾಗಿ ರೈತರ ಪಟ್ಟು

ಚತುಷ್ಪಥ ರಾಷ್ಟ್ರೀಯ ಹೆದ್ದಾರಿ (206) ಬೈಪಾಸ್ ನಿರ್ಮಾಣಕ್ಕೆ ವಶಪಡಿಸಿಕೊಳ್ಳಲು ನಿರ್ಧರಿಸಲಾಗಿರುವ ಭೂಮಿಗೆ ನ್ಯಾಯಯುತ ಪರಿಹಾರ ನೀಡಬೇಕೆಂದು ಅರಸೀಕೆರೆ ತಾಲ್ಲೂಕಿನ ಬೆಂಡೇಕೆರೆ ರೈತರು ಹಲವು ದಿನಗಳಿಂದ ಹೋರಾಟ ನಡೆಸುತ್ತಿದ್ದಾರೆ. ವಾಹನ ದಟ್ಟಣೆಯಿಂದ ಕೂಡಿರುವ ತುಮಕೂರು-ಶಿವಮೊಗ್ಗಾ ಚತುಷ್ಪಥ ಹೆದ್ದಾರಿಯನ್ನು ದಶಕಗಳ ಹಿಂದೆ ಮೇಲ್ದರ್ಜೆಗೇರಿಸಿ ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿತ್ತು. 2016ರ ಜೂ. 27 ರಂದು 15 ಹೆಕ್ಟೇರ್ ಜಮೀನು ವಶಕ್ಕೆ ಅಧಿಸೂಚನೆ ಹೊಡಿಸುವ ಜೊತೆಗೆ 2018 ಸೆ.7ರಂದು ಪರಿಹಾರದ ಮೊತ್ತವನ್ನು ಅಧಿಕೃತವಾಗಿ ಪ್ರಕಟಿಸಿತ್ತು. ಭೂಮಿ ಕಳೆದುಕೊಳ್ಳುವ 118 ಅನ್ನದಾತರರಿಗೆ ಪ್ರತಿ ಗುಂಟೆಗೆ 9336 ರೂ. ನಿಗದಿಪಡಿಸಿ 18.22 ಕೋಟಿ ರೂ. ಪರಿಹಾರದ ಮೊತ್ತ ನೀಡಲು ಆದೇಶ ಹೊರಡಿಸಿತ್ತು. ಸಭೆ ನಡೆದು ಬರೋಬ್ಬರಿ ಒಂದೂವರೆ ವರ್ಷದ ಬಳಿಕ ಪರಿಹಾರದ ಮೊತ್ತವನ್ನು 11,232 ರೂ. (ಅಂದಾಜು 2 ಸಾವಿರ ರೂ.)ಗೆ ಹೆಚ್ಚಿಸಿ ಕಾಮಗಾರಿ ನಿರ್ವಹಿಸಲು ಮುಂದಾಗಿರುವುದು ಅನ್ನದಾತರ ಆಕ್ರೋಶಕ್ಕೆ ಕಾರಣವಾಗಿದೆ.

### ರೈತರ ಬೇಡಿಕೆ ಏನು

ಪ್ರಸ್ತುತ ಮಾರುಕಟ್ಟೆ ದರದಂತೆ ಪ್ರತಿ ಗುಂಟೆಗೆ 30 ಸಾವಿರ ರೂ. ನೀಡಬೇಕೆನ್ನುವುದು ರೈತರ ಬೇಡಿಕೆ. ಈಡೇರದ ಹೊರತು ಭೂಮಿ ಬಿಟ್ಟುಕೊಡುವುದಿಲ್ಲ ಎಂದಿರುವುದು ಸಮಸ್ಯೆ ಜಟಿಲಗೊಳ್ಳುವಂತೆ ಮಾಡಿದೆ. ಕೆಲ ತಿಂಗಳ ಹಿಂದೆ ಎನ್‌ಹೆಚ್‌ಎಐ ಅಧಿಕಾರಿಗಳು ಸೂಚನೆ ನೀಡದೆ ಪೊಲೀಸ್ ಭದ್ರತೆಯೊಂದಿಗೆ ಹಿಟಾಚಿ, ಜೆಸಿಬಿ, ಟಿಪ್ಪರ್ ಹಾಗು ಟ್ಯಾಂಕರ್ ಜೊತೆಗೆ ಕಾಮಗಾರಿ ನಿರ್ವಹಿಸಲು ಸಿಬ್ಬಂದಿ ಆಗಮಿಸಿದ್ದರು. ರೊಚ್ಚಿಗೆದ್ದ ಭೂ ಸಂತ್ರಸ್ಥರು ಜನ ಜಾನುವಾರುಗಳೊಂದಿಗೆ

» ನಾಲ್ಕನೇ ಪುಟದಲ್ಲಿ

# ಸ್ವಾವಲಂಬಿ ಛಲ ಇದ್ದವರಿಗೆ ಪಿಎಂಎಫ್‌ಎಂಇ ಸಹಕಾರಿ: ಡಿ.ಸಿ.

• ಪ್ರಜೋದಯ ವರದಿ

**ಹಾಸನ:** ಆರ್ಥಿಕವಾಗಿ ಸ್ವಾವಲಂಬಿಯಾಗಬೇಕೆಂದರೆ ಸ್ವ ಉದ್ಯೋಗ ಅತ್ಯವಶ್ಯಕವಾಗಿದ್ದು, ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣ ಉದ್ದಿಮೆ (ಪಿಎಂಎಫ್‌ಎಂಇ) ವರದಾನವಾಗಲಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಪಿಎಂಎಫ್‌ಎಂಇ ಜಿಲ್ಲಾ ಮಟ್ಟದ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸ್ವಂತ ಉದ್ಯೋಗ ಮಾಡಲು ಇಚ್ಛಿಸುವವರಿಗೆ ಈ ಯೋಜನೆ ಸುವರ್ಣಾವಕಾಶ. ರೈತರು ಬಿತ್ತನೆ ಮಾಡಿ ಮಾರುಕಟ್ಟೆಗೆ ಬೆಳೆ ನೀಡಿದರೆ ಎಷ್ಟೋ ಬಾರಿ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವುದಿಲ್ಲ. ಬೆಳೆ ರೋಗ, ನೀರಿನ ಅಭಾವ ಹೀಗೆ ನಾನಾ ಸಮಸ್ಯೆಗಳಿಂದ ರೈತ ಸಂಕಷ್ಟಕ್ಕೆ ಸಿಲುಕುತ್ತಾನೆ. ಅಂತಹ ಸಂದರ್ಭದಲ್ಲಿ ಕಿರು ಉದ್ಯಮಗಳು ಕೈ ಹಿಡಿಯುತ್ತವೆ ಎಂದರು.

ಕೃಷಿಯಲ್ಲಿ ಶೇ.90 ರಷ್ಟು ರೈತ ಮಹಿಳೆಯರೇ ಕೆಲಸ ಮಾಡುವವರಿದ್ದಾರೆ. ಹಾಗಾಗಿ ಮಹಿಳೆಯರು ಈ ಯೋಜನೆಯ ಸದುಪಯೋಗ ಪಡೆಯಬೇಕು. ಸ್ತ್ರೀ ಶಕ್ತಿ, ಸ್ವ-ಸಹಾಯ ಗುಂಪಿನ ಮಹಿಳೆಯರು ಹೆಚ್ಚಿನ ಮಾಹಿತಿ ತಿಳಿದು ಸದುಪಯೋಗ ಪಡೆದುಕೊಳ್ಳಬೇಕು. ಸಕಲೇಶಪುರ ಭಾಗದಲ್ಲಿ ಕಾಫಿ, ಚನ್ನರಾಯಪಟ್ಟಣ ತಾಲ್ಲೂಕು ಭಾಗದಲ್ಲಿ ತೆಂಗು ಹೀಗೆ ಒಂದೊಂದು ಭಾಗದಲ್ಲಿ ಒಂದೊಂದು ವಿಶೇಷ ಬೆಳೆ ಇದೆ. ಅದನ್ನು ಆಧರಿಸಿ ಸ್ವ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬೇಕೆಂದರು.



### 15 ಲಕ್ಷ ರೂ. ಸಹದಾಯಧನ

ರೈತರು ಕಿರು ಉದ್ಯಮ ಮಾಡಲು ಕೇಂದ್ರ ಸರ್ಕಾರ 6 ಲ.ರೂ. ಹಾಗು ರಾಜ್ಯ ಸರ್ಕಾರದಿಂದ 9 ಲ.ರೂ. ಸೇರಿ 15 ಲ.ರೂ. ಸಹಾಯಧನ ನೀಡಲಾಗುತ್ತಿದೆ. ಈ ಉದ್ಯಮದ ಕುರಿತು ರೈತರಿಗೆ ಗೊಂದಲಗಳಿದ್ದಲ್ಲಿ ಕೃಷಿ ಅಧಿಕಾರಿಗಳನ್ನು ಭೇಟಿಯಾಗಿ ಬಗೆಹರಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಕೆಫೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್ ಅವರು ಮಾತನಾಡಿ, ಕಿರು ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಮೂಲಕ ಇತರರಿಗೂ ಮಾದರಿಯಾಗಬೇಕು. ಒಂದು ಘಟಕ ಸ್ಥಾಪನೆ ಮಾಡಿದರೆ 10 ಜನರಿಗೆ ಉದ್ಯೋಗ ಸೃಷ್ಟಿ ಆಗುತ್ತದೆ. ಜೊತೆಗೆ ಸ್ಥಳೀಯ ರೈತರಿಗೆ ಮೌಲ್ಯವರ್ಧನೆ ದೊರೆಯುತ್ತದೆ ಎಂದು ತಿಳಿಸಿದರು.

ಒಬ್ಬ ರೈತ ಐವರಿಗೆ ಯೋಜನೆಯ ಕುರಿತಾಗಿ ಮಾಹಿತಿ ನೀಡಿದರೆ ಸದುಪಯೋಗವಾಗುತ್ತದೆ. ಆಹಾರ ಸಂಸ್ಕರಣೆ ಮಾಡಿ ಮಾರಾಟ ಮಾಡುತ್ತಾರೋ ಅಂತಹವರಿಗೆ ಪ್ರೋತ್ಸಾಹ ನೀಡಬೇಕು. ಸಬ್ಸಿಡಿ ಆಧಾರಿತ ಸಾಲ ಯೋಜನೆಯ ಸದುಪಯೋಗ ಪಡೆದುಕೊಳ್ಳಿ ಎಂದರು.

» ನಾಲ್ಕನೇ ಪುಟದಲ್ಲಿ

# ಸ್ಮಾರ್ಟ್ ಬಜಾರ್‌ನಲ್ಲಿ ಕಳಪೆ ಆಹಾರ ಪದಾರ್ಥ

## ಆಹಾರ ಸುರಕ್ಷತಾ ಅಧಿಕಾರಿಗಳ ದಾಳಿ: ನೋಟೀಸ್ ಜಾರಿ

• ಪ್ರಜೋದಯ ವರದಿ

**ಹಾಸನ:** ನಗರ ಬಿ.ಎಂ.ರಸ್ತೆಯ ಲ್ಲಿರುವ ರಿಲಯನ್ಸ್ ಸ್ಮಾರ್ಟ್ ಬಜಾರ್‌ನಲ್ಲಿ ಕಳಪೆ ಹಾಗು ಅವಧಿ ಮೀರಿದ ಆಹಾರ ಪದಾರ್ಥಗಳನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದ ಹಿನ್ನಲೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಅಧಿಕಾರಿಗಳು ಮಂಗಳವಾರ ದಿಢೀರ್ ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ಜಿಲ್ಲಾ ಅಂಕಿತ ಅಧಿಕಾರಿ ಡಾ. ಶಶಿಧರ್ ಹಾಗು ತಾಲ್ಲೂಕು ಆಹಾರ ಸುರಕ್ಷತಾ ಅಧಿಕಾರಿ ಡಾ. ವಿಜಯ್ ಗೊರೂರು ಅವರ ನೇತೃತ್ವದ ತಂಡ ಪರಿಶೀಲನೆ ನಡೆಸಿದ ವೇಳೆ, ಸ್ಮಾರ್ಟ್ ಬಜಾರ್‌ನಲ್ಲಿ ಕೊಳೆತ ಸೇಬು, ಈರುಳ್ಳಿ, ಹೂ ಕೋಸು, ಕೊಬ್ಬರಿ ಜೊತೆಗೆ ಅವಧಿ ಮೀರಿದ ಪರೋಟ, ಇತರೆ ತಿನಿಸುಗಳು ಪತ್ತೆಯಾದ ಹಿನ್ನಲೆ ಅವುಗಳನ್ನು ವಶಪಡಿಸಿಕೊಳ್ಳಲಾಯಿತು.



ಇದೇ ವೇಳೆ ಸ್ಥಳದಲ್ಲಿದ್ದ ಕೆಲ ಆಹಾರ ಪದಾರ್ಥಗಳನ್ನು ಅಧಿಕಾರಿಗಳು ಪರೀಕ್ಷೆಗಾಗಿ ಕೊಂಡೊಯ್ದರು. ಬಳಿಕ ಮಳಿಗೆ ನಿರ್ವಾಹಕರಿಗೆ ನೋಟೀಸ್ ನೀಡಿದರು. ಮುಂದಿನ ಮೂರು ದಿನಗಳಲ್ಲಿ ಕಾನೂನು ಪ್ರಕಾರ ಲೀಗಲ್ ನೋಟೀಸ್ ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

» ನಾಲ್ಕನೇ ಪುಟದಲ್ಲಿ

# ಅಧಿಕಾರಿಗಳ ದುರ್ನಡತೆಯನ್ನು ಸಾರ್ವಜನಿಕರು ಖಂಡಿಸಬೇಕು : ಹೆಚ್.ಕೆ.ಸುರೇಶ್



• ಪ್ರಜೋದಯ ವರದಿ

**ಬೇಲೂರು :** ಉತ್ತಮವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ಶಭಾಷ್‌ಗಿರಿ ನೀಡಬೇಕು ಹಾಗೇ ಭ್ರಷ್ಟಾಚಾರದಲ್ಲಿ ತೊಡಗಿ ರೈತರಿಗೆ, ನಾಗರಿಕರಿಗೆ ಕಿರುಕುಳ ನೀಡುವ ಅಧಿಕಾರಿಗಳ ದುರ್ವರ್ತನೆಯನ್ನು ಖಂಡಿಸುವಲ್ಲಿ ಸಾರ್ವಜನಿಕರು ಮುಂದಾಗಬೇಕೆಂದು ಶಾಸಕ ಹೆಚ್.ಕೆ. ಸುರೇಶ್ ಅವರು ಹೇಳಿದರು.

ತಾಲೂಕಿನ ಕೋನೇರ್ಲು ಗ್ರಾಮದಲ್ಲಿ ಅರ್ಹ ಫಲಾನುಭವಿಗಳಿಗೆ ಸವಲತ್ತು ವಿತರಿಸಿ ಮಾತನಾಡಿದ ಅವರು, ಭ್ರಷ್ಟಾಚಾರ ರಹಿತ ತಾಲೂಕನ್ನು ಮಾಡುವುದಾಗಿ ಚುನಾವಣೆಯ ಸಂದರ್ಭದಲ್ಲಿ ಭರವಸೆ ನೀಡಿದ್ದೆ. ಆ ಮಾತಿಗೆ ಇಂದಿಗೂ ತಾವು ಬದ್ಧರಾಗಿದ್ದು, ತಮ್ಮ ಕೈಲಾದ ಮಟ್ಟಿಗೆ ತಹಬದಿಗೆ ತಂದಿದ್ದೇನೆ. ತಮ್ಮ ಕೈ ಕೆಳಗಿನ ನೌಕರರಿಗೆ ರಾತ್ರಿ ವೇಳೆ ಮೊಬೈಲ್ ಕರೆ ಮಾಡಿ ಕಿರುಕುಳ ಕೊಡುವುದು, ಅಡುಗೆ ಸಹಾಯಕರಿಂದ ಹಣ ಕೇಳುವುದು ಸೇರಿ ಹಲವಾರು ದೂರುಗಳಿರುವ ಅಧಿಕಾರಿಯನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕಾ ಅಥವಾ ಅಂತಹವರನ್ನು ಶಿಕ್ಷಿಸಬೇಕಾ, ನಾನು ರೈತ ಕುಟುಂಬದಿಂದ ಬಂದವನು

» ನಾಲ್ಕನೇ ಪುಟದಲ್ಲಿ

## 24 ಸಾವಿರ ರೂ.ಗೆ ಕುಸಿದಿದ್ದ ಎಪಿ 28,500ರೂ.ಗೆ ಏರಿಕೆ |ಬ್ರೆಜಿಲ್ ಕಾಫಿ ರಫ್ತು ಕುಸಿತದಿಂದ ಧಾರಣೆ ಚೇತರಿಕೆ

# ಮೂರು ತಿಂಗಳ ಬಳಿಕ ಮತ್ತೆ ಕಾಫಿ ಧಾರಣೆ ಜಿಗಿತ

• ಪ್ರಜೋದಯ ವರದಿ

**ಹಾಸನ:** ಜಾಗತಿಕ ಮಟ್ಟದಲ್ಲಿ ಐತಿಹಾಸಿಕ ದಾಖಲೆ ಬರೆದು, ಮೂರು ತಿಂಗಳ ಹಿಂದೆ ಕುಸಿತ ಕಂಡಿದ್ದ ಕಾಫಿ ಧಾರಣೆ ಸೆಪ್ಟೆಂಬರ್ ತಿಂಗಳಿನಿಂದ ಮತ್ತೆ ಜಿಗಿತವಾಗಿದೆ.

ಮೇ ತಿಂಗಳ ಆರಂಭದಲ್ಲಿ ಅರೇಬಿಕಾ ಪಾರ್ಚ್‌ಮೆಂಟ್ 50 ಕೆ.ಜಿ ಚೀಲಕ್ಕೆ 27,550 ರೂ. ಧಾರಣೆ ಇದ್ದರೆ, ರೊಬಸ್ಟಾ ಪಾರ್ಚ್‌ಮೆಂಟ್ 22,150 ರೂ. ಗರಿಷ್ಠ ಬೆಲೆ ಮಾರುಕಟ್ಟೆಯಲ್ಲಿತ್ತು. ಮೇ 15 ರಲ್ಲಿ 26,500 ರೂ.ಕ್ಕೆ ಕುಸಿಯಿತು. ಮೇ ಅಂತ್ಯದಲ್ಲಿ 25,500 ರೂ.ಕ್ಕೆ ಬಂದು ನಿಂತಿತ್ತು. ಹೀಗೆ ಮೇ ತಿಂಗಳಲ್ಲಿ ಇಳಿಮುಖವಾಗುತ್ತಲೇ ಬಂದ ಕಾಫಿ ಧಾರಣೆ ಜೂನ್‌ನಲ್ಲಿಯೂ ಕೂಡ 25 ಸಾವಿರದ ಆಸುಪಾಸಿನಲ್ಲೇ ಬೆಲೆ ಗಿರಕಿ ಹೊಡೆಯಿತು.

ಜುಲೈ ತಿಂಗಳಲ್ಲಿ ಇದ್ದಕ್ಕಿದ್ದಂತೆ ಬೆಲೆ ತೀವ್ರ ಕುಸಿದು 50 ಕಿ.ಜಿ ಚೀಲಕ್ಕೆ 27 ಸಾವಿರ ರೂ. ಇದ್ದ ಬೆಲೆ 23,900ಕ್ಕೆ ಇಳಿಯಿತು. ಮತ್ತೆ ಸೆಪ್ಟೆಂಬರ್‌ನಿಂದ ಚೇತರಿಕೆ ಕಂಡುಬಂದಿದ್ದು, ಅರೇಬಿಕಾ ಪಾರ್ಚ್‌ಮೆಂಟ್ ಮೊದಲ ವಾರದಲ್ಲಿ ಧಾರಣೆ 28,800ರೂ.ಗೆ ಜಿಗಿತವಾದರೆ,



ರೊಬಸ್ಟಾ ಪಾರ್ಚ್‌ಮೆಂಟ್ 17,500 ರೂ.ಗೆ ತಲುಪಿತ್ತು.

ಮಂಗಳವಾರದ ಮಾರುಕಟ್ಟೆ ಧಾರಣೆಯಲ್ಲಿ ಅರೇಬಿಕಾ ಪಾರ್ಚ್‌ಮೆಂಟ್- 28,500 ರೂ., ಅರೇಬಿಕಾ ಚೆರಿ -14,500 ರೂ., ರೊಬಸ್ಟಾ ಪಾರ್ಚ್ ಮೆಂಟ್-17,850 ರೂ., ರೊಬಸ್ಟಾ ಚೆರಿ-10,500 ರೂ.ಗೆ ತಲುಪುವ ಮೂಲಕ ಚೇತರಿಕೆ ಕಾಣುತ್ತಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅರೇಬಿಕಾ ಕಾಫಿ ಧಾರಣೆ ಶೇ.10 ರಿಂದ 12ರಷ್ಟು ಏರಿಕೆ ಕಂಡುಬಂದಿದೆ. ರೊಬಸ್ಟಾ ಬೆಲೆ ಶೇ.18-19 ರಷ್ಟು ಹೆಚ್ಚಾಗಿದೆ.

### ಈ ವರ್ಷದಲ್ಲಾದ ಬೆಲೆ ಏರಿಳಿತ

2025 ಜನವರಿ ಮೊದಲ ವಾರದಲ್ಲಿ ಅರೇಬಿಕಾ ಪಾರ್ಚ್‌ಮೆಂಟ್-22,500ರೂ., ಚೆರಿ-12,200ರೂ., ರೊಬಸ್ಟಾ ಪಾರ್ಚ್‌ಮೆಂಟ್-19,600ರೂ., ಚೆರಿ-10,750 ಇತ್ತು. ಫೆಬ್ರವರಿ ಮೊದಲ ವಾರದ ಅಂತ್ಯಕ್ಕೆ ಅರೇಬಿಕಾ ಪಾರ್ಚ್‌ಮೆಂಟ್ -28,000ರೂ., ಚೆರಿ-16,000ರೂ. ರೊಬಸ್ಟಾ ಪಾರ್ಚ್‌ಮೆಂಟ್-24,000ರೂ., ಚೆರಿ-13,000ರೂ. ಗೆ ತಲುಪಿತ್ತು. ಆದರೆ, ಫೆಬ್ರವರಿ ಎರಡನೇ ವಾರದ ಪ್ರಾರಂಭದಲ್ಲೇ ಎಪಿ-30,000 ರೂ., ಎಸಿ-17,000 ರೂ., ಆರ್‌ಪಿ-24,500ರೂ., ಆರ್‌ಸಿ-13,250ರೂ.ಗೆ ಏರಿಕೆ ಕಾಣುವ ಮೂಲಕ ಅಚ್ಚರಿ ಮೂಡಿಸಿತ್ತು.

### ಕಾಫಿ ಧಾರಣೆ (ಮಂಗಳವಾರ)

ಅರೇಬಿಕಾ ಪಾರ್ಚ್‌ಮೆಂಟ್: 28,500 ರೂ.
ಅರೇಬಿಕಾ ಚೆರಿ : 14,500 ರೂ.
ರೊಬಸ್ಟಾ ಪಾರ್ಚ್‌ಮೆಂಟ್: 17,850 ರೂ.
ರೊಬಸ್ಟಾ ಚೆರಿ : 10,500 ರೂ.

### ಜುಲೈ ತಿಂಗಳ ಕಾಫಿ ಧಾರಣೆ

ಅರೇಬಿಕಾ ಪಾರ್ಚ್‌ಮೆಂಟ್: 23,500 ರೂ.
ಅರೇಬಿಕಾ ಚೆರಿ : 12,000 ರೂ.
ರೊಬಸ್ಟಾ ಪಾರ್ಚ್‌ಮೆಂಟ್: 15,500 ರೂ.
ರೊಬಸ್ಟಾ ಚೆರಿ : 8,500 ರೂ.

### ಬ್ರೆಜಿಲ್ ಕಾಫಿ ರಫ್ತು ಕುಸಿತ

ಬ್ರೆಜಿಲ್‌ನಲ್ಲಿ ವಿಪರೀತ ಶೀತ ವಾತಾವರಣ, ಮಂಜು ಬೀಳುತ್ತಿರುವುದರಿಂದ ಕಾಫಿ ಬೆಳೆ ನಷ್ಟಕ್ಕಿಡಾಗುತ್ತಿದೆ. ಅಂಕಿ-ಅಂಶದ ಪ್ರಕಾರ ಬ್ರೆಜಿಲ್‌ನಲ್ಲಿ ಶೇ.20ಕ್ಕೂ ಕಡಿಮೆ ಪ್ರಮಾಣದಲ್ಲಿ ಕಾಫಿ ರಫ್ತು ಮಾಡಲಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಉಂಟಾದ ಕಾಫಿ ಕೊರತೆ ಕೂಡ ಈಗಿನ ಕಾಫಿ ಧಾರಣೆ ದಿಢೀರ್ ಏರಿಕೆಯಾಗಲು ಕಾರಣ ಎನ್ನಲಾಗುತ್ತಿದೆ.



ಇನ್ನೊಂದಡೆ ಬ್ರೆಜಿಲ್‌ನಿಂದ ಅಮೇರಿಕಾಕ್ಕೆ ರಫ್ತಾಗುವ ಕಾಫಿ ಮೇಲೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶೇ.50 ರಷ್ಟು ಸುಂಕ ವಿಧಿಸಿದ್ದು, ರಫ್ತು ಮಾರುಕಟ್ಟೆಯಲ್ಲಿ ಸುಂಕದ ಬಗೆಗಿನ ಗೊಂದಲ ಕಾಫಿ ರಫ್ತು ಮತ್ತು ಬೆಲೆ ಮೇಲೆ ಗಮನಾರ್ಹ ಪರಿಣಾಮ ಬೀರಿದೆ ಎನ್ನಲಾಗುತ್ತಿದೆ.

ಇಂಡೋನೇಷ್ಯಾದಲ್ಲಿ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಭಾರೀ ಮಳೆ ಪರಿಣಾಮ ಬೆಳೆಗೆ ಹಾನಿಯಾಗುವ ಸಂಭವವಿದೆ. ವಿಯೆಟ್ನಾಂನಲ್ಲಿ ಸ್ಥಳೀಯ ವ್ಯಾಪಾರಿಗಳು ಕಡಿಮೆ ಲಿಕ್ವಿಡಿಟಿ (ಹಣ ಹರಿವು) ಬಗ್ಗೆ ಚಿಂತನೆ ವ್ಯಕ್ತಪಡಿಸಿದ್ದಾರೆ. ಇದರ ಪರಿಣಾಮ ಪೂರೈಕೆ ಹರಿವು ಕುಂಠಿತಗೊಂಡಿದ್ದು, ಅಂತರ್ರಾಷ್ಟ್ರೀಯ ಮಾರುಕಟ್ಟೆಯ ಬೆಲೆ ಏರಿಳಿತವನ್ನು ಮತ್ತಷ್ಟು ತೀವ್ರಗೊಳಿಸಿದೆ. ಪ್ರಸ್ತುತ ಪರಿಸ್ಥಿತಿ ಮುಂದುವರಿದರೆ ರೊಬಸ್ಟಾ ಕಾಫಿ ಬೆಲೆ ಏರಿಕೆಗೆ ದಾರಿ ಮಾಡಿಕೊಡಬಹುದೆಂಬ ನಿರೀಕ್ಷೆ ಇದೆ.

# ಸಾವಿಗೆ ಶರಣಾಗಿ ಸಾಧಿಸುವುದೇನಿಲ್ಲ, ಬದುಕಿ ಜಯಿಸೋಣ..

**ಇಂದು ವಿಶ್ವ ಆತ್ಮಹತ್ಯೆ ತಡೆ ದಿನ**

ಆತ್ಮಹತ್ಯೆಯ ಭೂತ ಯಾವ ದೇಶವನ್ನೂ ಬಿಟ್ಟಿಲ್ಲ. ವಿಶ್ವದೆಲ್ಲೆಡೆ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಇದಕ್ಕೆ ವೈಯಕ್ತಿಕ, ಆ ದೇಶದ ಸಾಂಸ್ಕೃತಿಕ, ಧಾರ್ಮಿಕ, ಲಿಂಗ ಅಥವಾ ಜೀವನ ಶೈಲಿಗಳು ಕಾರಣವಾಗಿರುತ್ತದೆ. ಭಾರತದಲ್ಲೂ ವರ್ಷಕ್ಕೆ ಲಕ್ಷಕ್ಕಿಂತ ಹೆಚ್ಚು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಮೂಲ್ಯವಾದ ಬದುಕನ್ನು ಯಾವುದೋ ಕಾರಣಕ್ಕಾಗಿ ಕಳೆದುಕೊಳ್ಳುವ ಪ್ರವೃತ್ತಿ ದಿನೇ ದಿನೇ ಹೆಚ್ಚುತ್ತಿದೆ. ಈ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶ್ವದೆಲ್ಲೆಡೆ ಪ್ರತಿ ವರ್ಷ ಸೆಪ್ಟೆಂಬರ್ 10ರಂದು ವಿಶ್ವ ಆತ್ಮಹತ್ಯೆ ತಡೆ ದಿನ ಆಚರಿಸಲಾಗುತ್ತಿದೆ.

ಪ್ರತಿ ಜೀವಿಯ ಹುಟ್ಟು ಆಕಸ್ಮಿಕ ಹಾಗೂ ಸಾವು ನಿಶ್ಚಿತ. ಯಾವೊಬ್ಬ ಮನುಷ್ಯನೂ ತನ್ನ ಆಯ್ಕೆಯಂತೆ ಜನಿಸಲು ಸಾಧ್ಯವಿಲ್ಲ. ಸಾವು ನಿಶ್ಚಿತವಾದರೂ ಅದನ್ನು ನಾವೇ ಆಹ್ವಾನಿಸುವುದು ಎಷ್ಟು ಸರಿ? ಅದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನಮಗಿದೆಯೇ? ಖಂಡಿತವಾಗಿಯೂ ಇಲ್ಲ. ಪ್ರತಿ ಜೀವಿಯು, ವಸ್ತುಗಳೂ ಪರಿಸರದ ಒಂದು ಅಂಗ. ಅದರಂತೆ ಮನುಷ್ಯನೂ ಸಮುದಾಯದ ಒಂದು ಭಾಗ.

ಜಗತ್ತಿನಲ್ಲಿ ಆತ್ಮಹತ್ಯೆ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ದಿನವನ್ನು ಆಯೋಜಿಸಲು ಅಂತಾರಾಷ್ಟ್ರೀಯ ಆತ್ಮಹತ್ಯೆ ತಡೆಗಟ್ಟುವ ಸಂಘ (ಐಎಎಸ್‌ಪಿ), ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತು ವಿಶ್ವ ಮಾನಸಿಕ ಆರೋಗ್ಯ ಒಕ್ಕೂಟ (ಡಬ್ಲ್ಯುಎಫ್‌ಎಂಹೆಚ್)ದ ಸಹಯೋಗದೊಂದಿಗೆ ಇದನ್ನು ಆಚರಿಸಲಾಗುತ್ತದೆ. ಆತ್ಮಹತ್ಯೆ ತಡೆಗಟ್ಟಲು ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂಬ ವಿಷಯದೊಂದಿಗೆ ಈ ಬಾರಿ ವಿಶ್ವ ಆತ್ಮಹತ್ಯೆ ತಡೆ ದಿನ ಆಚರಿಸಲಾಗುತ್ತಿದೆ.

ಆತ್ಮಹತ್ಯೆ ತಡೆಗಟ್ಟುವುದು ಸಾರ್ವತ್ರಿಕ ಸವಾಲಾಗಿದೆ. ಪ್ರತಿ ವರ್ಷ ಎಲ್ಲಾ ವಯಸ್ಸಿನ ಜನರ ಸಾವಿಗೆ 20 ಪ್ರಮುಖ ಕಾರಣಗಳು ಇವೆ. ಇವುಗಳಿಂದ 800,000ಕ್ಕೂ ಹೆಚ್ಚು ಸಾವುಗಳಿಗೆ ಸಂಭವಿಸಿವೆ. ಅಂದರೆ ಪ್ರತಿ 40 ಸೆಕೆಂಡಿಗೆ ಒಂದು ಆತ್ಮಹತ್ಯೆ ನಡೆಯುತ್ತಿದೆ.

ಕಳೆದು ಹೋದ ಪ್ರತಿಯೊಬ್ಬರ ಜೀವನವೂ ಇನ್ನೊಬ್ಬರ ಪಾಲುದಾರ, ಮಗು, ಪೋಷಕರು, ಸ್ನೇಹಿತ ಅಥವಾ ಸಹೋದ್ಯೋಗಿಯನ್ನು ಪ್ರತಿನಿಧಿಸುತ್ತದೆ. ಪ್ರತಿ ಆತ್ಮಹತ್ಯೆಗೆ ಸರಿಸುಮಾರು 135 ಜನರು ತೀವ್ರ ದುಃಖವನ್ನು ಅನುಭವಿಸುತ್ತಾರೆ ಅಥವಾ ಅದರ ಪರಿಣಾಮ ಅನುಭವಿಸುತ್ತಾರೆ. ಪ್ರತಿ ಆತ್ಮಹತ್ಯೆಯಿಂದ ಸುಮಾರು 25 ಜನರು ಆತ್ಮಹತ್ಯೆ ಪ್ರಯತ್ನ ಮಾಡುತ್ತಾರೆ.

**ಅಂಕಿ ಅಂಶಗಳು:** ಕಳೆದ 45 ವರ್ಷಗಳಲ್ಲಿ ವಿಶ್ವಾದ್ಯಂತ ಶೇ. 60ರಷ್ಟು ಪ್ರಕರಣಗಳು ಹೆಚ್ಚಾಗಿವೆ. ಜಾಗತಿಕವಾಗಿ ಸಂಭವಿಸುವ ಸಾವಿಗೆ ಆತ್ಮಹತ್ಯೆ 15ನೇ ಪ್ರಮುಖ ಕಾರಣವಾಗಿದೆ. ಎಲ್ಲಾ ಸಾವುಗಳಲ್ಲಿ ಆತ್ಮಹತ್ಯೆಯೂ ಶೇ.1.4ರಷ್ಟಿದೆ ಮತ್ತು ಜಾಗತಿಕ ಆತ್ಮಹತ್ಯೆ ಪ್ರಮಾಣ 100,000 ಜನಸಂಖ್ಯೆಗೆ 11.4 ಆಗಿದೆ.


ಪುರುಷರ ಪ್ರಮಾಣ – 15.0 / 100 000

ಮಹಿಳೆಯರ ಪ್ರಮಾಣ – 8.0 / 100 000

ಅನೇಕ ಯುರೋಪಿಯನ್ ದೇಶಗಳಲ್ಲಿ 15-24 ವರ್ಷ ವಯಸ್ಸಿನವರು ಹೆಚ್ಚು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ವಯಸ್ಕರಲ್ಲಿ ಜಾಗತಿಕವಾಗಿ ಆತ್ಮಹತ್ಯೆ ಪ್ರಮಾಣ ಸ್ತ್ರೀಯರಿಗಿಂತ ಪುರುಷರಲ್ಲೇ ಹೆಚ್ಚಾಗಿದೆ.

2012ರಲ್ಲಿ ಶೇ.76ರಷ್ಟು ಜಾಗತಿಕ ಆತ್ಮಹತ್ಯೆ ಕಡಿಮೆ ಮತ್ತು ಮಧ್ಯಮ-ಆದಾಯದ ದೇಶಗಳಲ್ಲಿ ಸಂಭವಿಸಿದೆ. ಅದರಲ್ಲಿ ಶೇ.39ರಷ್ಟು ಆಗ್ನೇಯ ಏಷ್ಯಾ ದೇಶಗಳಲ್ಲಿ ಸಂಭವಿಸಿದೆ.

ಶರಿಯಾ ಕಾನೂನಿನ ಪ್ರಕಾರ 25 ದೇಶಗಳಲ್ಲಿ (ಡಬ್ಲ್ಯುಎಚ್‌ಒ ಸದಸ್ಯ ರಾಷ್ಟ್ರಗಳಲ್ಲಿ) ಆತ್ಮಹತ್ಯೆಯನ್ನು ಇನ್ನೂ ಅಪರಾಧೀಕರಿಸಲಾಗಿದೆ. ಹೆಚ್ಚುವರಿ 20 ದೇಶಗಳಲ್ಲಿ ಆತ್ಮಹತ್ಯೆ ಪ್ರಯತ್ನ ಮಾಡುವವರಿಗೆ ಜೈಲು ಶಿಕ್ಷೆ ವಿಧಿಸಬಹುದು.



**ಆತ್ಮಹತ್ಯಾ ಭಾವನೆಗಳು ಯಾವುವು?**

ಆತ್ಮಹತ್ಯೆಯು ಆನುವಂಶಿಕ, ಮಾನಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಪಾಯಕಾರಿ ಅಂಶಗಳನ್ನು ಒಳಗೊಂಡಿದೆ. ಆದರೆ ಸೀಮಿತವಾಗಿರದ ಅಪಾಯಕಾರಿ ಅಂಶಗಳ ಒಮ್ಮುಖದ ಪರಿಣಾಮವಾಗಿದೆ. ಕೆಲವೊಮ್ಮೆ ಆಘಾತ ಮತ್ತು ನಷ್ಟದ ಅನುಭವಗಳೊಂದಿಗೆ ಸಂಯೋಜಿಸ ಲ್ಪಟ್ಟಿದೆ.

ಆತ್ಮಹತ್ಯೆಯಿಂದ ಸಾಯುವ ಜನರಲ್ಲಿ ಖಿನ್ನತೆಯು ಸಾಮಾನ್ಯವಾಗಿ ಕಂಡು ಬರುವ ಮಾನಸಿಕ ಅಸ್ವಸ್ಥತೆಯಾಗಿದೆ.

ಆತ್ಮಹತ್ಯೆಯಿಂದ ಸಾಯುವ ಹೆಚ್ಚಿನ ಆದಾಯದ ದೇಶಗಳಲ್ಲಿ ಶೇ.50ರಷ್ಟು ವ್ಯಕ್ತಿಗಳು ತಮ್ಮ ಸಾವಿನ ಸಮಯದಲ್ಲಿ ದೊಡ್ಡ ಖಿನ್ನತೆಯಿಂದ ಬಳಲುತ್ತಿರುತ್ತಾರೆ.

ಪ್ರತಿ ಒಂದು ಆತ್ಮಹತ್ಯೆಗೆ 25 ಜನರು ಆತ್ಮಹತ್ಯೆ ಪ್ರಯತ್ನವನ್ನು ಮಾಡುತ್ತಾರೆ. 135 ಜನರು ಪ್ರತಿ ಆತ್ಮಹತ್ಯೆ ಸಾವಿನಿಂದ ಪ್ರಭಾವಿತರಾಗುತ್ತಾರೆ. ಇದು ಪ್ರತಿವರ್ಷ ವಿಶ್ವಾದ್ಯಂತ ಆತ್ಮಹತ್ಯೆಯಿಂದ ಬಳಲುತ್ತಿರುವ 108 ದಶಲಕ್ಷ ಜನರಿಗೆ ಸಮನಾಗಿರುತ್ತದೆ.

ಆತ್ಮಹತ್ಯೆಗೆ ಮಾನಸಿಕ ಸ್ಥಿಮಿತತೆ ಕಳೆದುಕೊಳ್ಳುವುದು ಒಂದು ಕಾರಣವಾಗಿದೆ.

ಕುಟುಂಬ ಮತ್ತು ಸುತ್ತಲಿನ ಪರಿಸರವೂ ಆತ್ಮಹತ್ಯೆಗೆ ಕಾರಣವಾಗುತ್ತದೆ.

## ಆತ್ಮಹತ್ಯೆ ತಡೆಗೆ ನಮ್ಮ ಪಾತ್ರ:

- ಯಾವುದೋ ಒಬ್ಬ ವ್ಯಕ್ತಿ ಖಿನ್ನನಾಗಿದ್ದಾನೆಂದರೆ, ಸಾವಿನ ಕುರಿತು ಮಾತಾಡುತ್ತಿದ್ದಾನೆಂದರೆ ಅವರನ್ನು ಒಂದೆರಡು ಗಂಟೆ, ದಿನಗಳ ಮಟ್ಟಿಗೆ ನಮ್ಮ ಆಪ್ತ ಪರಿಧಿಯೊಳಗೆ ಇಟ್ಟುಕೊಳ್ಳುವುದು.
- ನೋವಿಗೆ ಸಮಯ ಕೊಡುವ, ಸಮಸ್ಯೆಗೆ ಕಿವಿಯಾಗುವ ಕನಿಷ್ಠ ಹೃದಯವಂತಿಕೆ ತೋರಿಸುವುದು.
- ವ್ಯಕ್ತಿಗೆ ಸಾಮಾಜಿಕ ಸಂಸ್ಕಾರ-ಬದ್ಧತೆ, ಕೌಟುಂಬಿಕ ಜವಾಬ್ದಾರಿ, ವೈಯಕ್ತಿಕ ಮಹತ್ವದ ಕುರಿತು, ತಿಳುವಳಿಕೆ ಸಿಕ್ಕರೆ ಅರ್ಧದಷ್ಟು ಆತ್ಮಹತ್ಯೆಗಳು ನಿಲ್ಲುತ್ತವೆ.
- ಖಿನ್ನತೆಯಂತಹ ಕಾಯಿಲೆಗೆ ಆಸ್ಪತ್ರೆಗಳಿವೆ.
- ಸಮುದಾಯದ ಸಂಪರ್ಕ, ಸಂವಹನದ ಜೊತೆಗೆ ಹವ್ಯಾಸ, ಸೃಜನಾತ್ಮಕ ಚಟುವಟಿಕೆ, ಸಮಸ್ಯೆ ನಿವಾರಣೆಗೆ ಮನಸ್ಸು ತಯಾರಿಡುವುದು.
- ಯಶಸ್ಸೇ ಬದುಕಲ್ಲ ಎನ್ನುವ ಸರಳ ಸೂತ್ರವನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು ಆರೋಗ್ಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸುವುದು.

**ಸಮುದಾಯದ ಮಹತ್ವ**

ನಾವೆಲ್ಲರೂ ಸಮುದಾಯದ ಭಾಗವಾಗಿದ್ದೇವೆ, ಕುಟುಂಬ, ಸ್ನೇಹಿತರು, ಕೆಲಸದ ಸಹೋದ್ಯೋಗಿಗಳು, ನೆರೆಹೊರೆಯವರೊಂದಿಗೆ ಸಂಪರ್ಕ ಹೊಂದಿದ್ದರೆ, ಕೆಲವು ಆತಂಕಗಳನ್ನು ನಿವಾರಿಸಲು ಸಮುದಾಯ ಸಹಾಯ ಮಾಡುತ್ತದೆ.

ಕೆಲವೊಮ್ಮೆ ನಾವು ನಮ್ಮ ಕುಟುಂಬ, ಗೆಳೆಯರೊಂದಿಗೆ ಪ್ರತ್ಯೇಕವಾಗಿ, ಅವರ ಸಂಪರ್ಕ ಕಡಿತಗೊಳಿಸುತ್ತೇವೆ.

ನಮ್ಮ ಸಮುದಾಯಗಳಲ್ಲಿ ದುರ್ಬಲರಾಗುವವರನ್ನು ಬೆಂಬಲಿಸುವ ಮತ್ತು ಅಧಿಕಾರ ನೀಡುವ ಜವಾಬ್ದಾರಿ ನಮ್ಮ ಮೇಲಿದೆ.

ಅವರೊಂದಿಗೆ ಮಾತನಾಡಿ ಸಲಹೆ ನೀಡುವ ಮೂಲಕ ಮತ್ತು ಅವರಿಗೆ ಬೆಂಬಲವನ್ನು ನೀಡುವ ಮೂಲಕ ನೀವು ಅವರ ನಿರ್ಧಾರವನ್ನು ಬದಲಾಯಿಸಬಹುದು.

**ಭಾರತದಲ್ಲಿ ಆತ್ಮಹತ್ಯೆ ಪ್ರಮಾಣ**

ಪ್ರತಿ ವರ್ಷ ನಮ್ಮ ದೇಶದಲ್ಲಿ 1,00,000ಕ್ಕೂ ಹೆಚ್ಚು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ವೃತ್ತಿಪರ/ವೃತ್ತಿ ಸಮಸ್ಯೆಗಳು, ಪ್ರತ್ಯೇಕತೆಯ ಪ್ರಜ್ಞೆ, ನಿಂದನೆ, ಹಿಂಸೆ, ಕೌಟುಂಬಿಕ ಸಮಸ್ಯೆಗಳು, ಮಾನಸಿಕ ಅಸ್ವಸ್ಥತೆ, ಮದ್ಯದ ಚಟ, ಆರ್ಥಿಕ ನಷ್ಟ, ದೀರ್ಘಕಾಲದ ನೋವು ಮುಂತಾದವು ಆತ್ಮಹತ್ಯೆಗೆ ಕಾರಣಗಳಾಗಿವೆ.

2019ರಲ್ಲಿ ದೇಶದಲ್ಲಿ ಒಟ್ಟು 1,39,123 ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು, 2018ಕ್ಕೆ ಹೋಲಿಸಿದರೆ ಶೇ.3.4ರಷ್ಟು ಹೆಚ್ಚಳವಾಗಿದೆ. 2019ರಲ್ಲಿ ಪ್ರತಿದಿನ 381 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2019ರ ವರ್ಷದಲ್ಲಿ ಸುಮಾರು 1 ಲಕ್ಷದ 39 ಸಾವಿರದ 123 ಸಾವುಗಳು ಆತ್ಮಹತ್ಯೆಯಿಂದ ಸಂಭವಿಸಿವೆ. ದೇಶದಲ್ಲಿ ಆತ್ಮಹತ್ಯೆ ಪ್ರಮಾಣ ಶೇ.10.4ಗಿಂತ ಹೆಚ್ಚಾಗಿದೆ. ಶೇ.32.4ರಷ್ಟು ಪ್ರಕರಣಗಳ ಹಿಂದೆ ಕೌಟುಂಬಿಕ ವಿವಾದಗಳು, ಶೇ.5.5ರಷ್ಟು ಆತ್ಮಹತ್ಯೆಯ ಹಿಂದೆ ವಿವಾಹವಾದರು, ಶೇ.17.1ರಷ್ಟು ಆತ್ಮಹತ್ಯೆಯ ಹಿಂದೆ ಅನಾರೋಗ್ಯದ ಕಾರಣ ಇದೆ.




## ಆತ್ಮಹತ್ಯೆಯ ಎಚ್ಚರಿಕೆ:

- ಅತಿಯಾದ ದುಃಖ ಅಥವಾ ಆಗಾಗ ಚಿತ್ತ ಸ್ಥಿತಿಯ ಬದಲಾವಣೆಗಳು
- ಹತಾಶತೆ-ಭವಿಷ್ಯದ ಬಗ್ಗೆ ಭರವಸೆ ಕಳೆದುಕೊಳ್ಳುವುದು.
- ನಿದ್ರೆಯ ಸಮಸ್ಯೆ-ಇದು ದೀರ್ಘಕಾಲದ ನಿದ್ರಾಹೀನತೆಗೆ ಕಾರಣವಾಗಬಹುದು.
- ಹಠಾತ್ ಶಾಂತತೆ
- ಸಾಮಾಜಿಕ ವಾಪಸಾತಿ- ಒಂಟಿತನ, ಕುಟುಂಬ, ಸ್ನೇಹಿತರಿಂದ ದೂರವಿರುವುದು.
- ಅಸಡ್ಡೆ, ಡ್ರಗ್ಸ್ ಮತ್ತು ಆಲ್ಕೋಹಾಲ್ ತೆಗೆದುಕೊಳ್ಳುವುದು, ನಿಮ್ಮ ದೇಹದ ಭಾಗಗಳನ್ನು ಕೊಯ್ದುಕೊಳ್ಳುವುದು.

## ಆತ್ಮಹತ್ಯೆ ತಡೆಗಟ್ಟಲು ಇರುವ ಸವಾಲುಗಳು:

- ಸಾಕಷ್ಟು ಸಂಪನ್ಮೂಲಗಳು ಇಲ್ಲ
- ಪರಿಣಾಮಕಾರಿಯಲ್ಲದ ಸಮನ್ವಯತೆ
- ಜಾರಿಗೊಳಿಸಿದ ಮಾರ್ಗಸೂಚಿಗಳ ಕೊರತೆ
- ಸ್ವತಂತ್ರ ಮತ್ತು ವ್ಯವಸ್ಥಿತ ಮೌಲ್ಯಮಾಪನದ ಕೊರತೆ
- ಆತ್ಮಹತ್ಯೆಯನ್ನು ತಡೆಗಟ್ಟುವ 2014 ರ ಡಬ್ಲ್ಯುಎಚ್‌ಒ ಜಾಗತಿಕ ವರದಿಯಿಂದ, ಆತ್ಮಹತ್ಯೆ ತಡೆಗಟ್ಟುವಲ್ಲಿ ಪ್ರಗತಿ ನಡೆಯುತ್ತಿದೆ. ಅನೇಕ ದೇಶಗಳು 2ನೇ ರಾಷ್ಟ್ರೀಯ ಆತ್ಮಹತ್ಯೆ ತಡೆಗಟ್ಟುವ ಕಾರ್ಯಕ್ರಮವನ್ನು ಪ್ರಾರಂಭಿಸಿವೆ. ಅವುಗಳೆಂದರೆ: ಸ್ಕಾಟ್ಲೆಂಡ್, ಇಂಗ್ಲೆಂಡ್, ಐರ್ಲೆಂಡ್ ಮತ್ತು ಯುನೈಟೆಡ್ ಸ್ಟೇಟ್ಸ್,

ಶೇ.70.2ರಷ್ಟು ಪುರುಷರು, ಶೇ.29.8ರಷ್ಟು ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದು, ಹೆಚ್ಚಾಗಿ ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡವರು – ಶೇ.53

ವಿಷ ಸೇವಿಸಿದವರು – ಶೇ.25.8

ನೀರಿನಲ್ಲಿ ಮುಳುಗಿ ಸತ್ತವರು – ಶೇ.5.2

ಸೆಲ್ಫ್ ಇಮೊಲೇಷನ್ ಮಾಡಿಕೊಂಡವರು – ಶೇ.3.8

ನಿಮ್ಮ ಬಳಿ ಆತ್ಮಹತ್ಯೆ ಮಾಡಿಕೊಳ್ಳಲು ಇಚ್ಚಿಸಿರುವವರು ಸಮಸ್ಯೆ ಅಥವಾ ನೋವನ್ನು ಹೇಳಿಕೊಂಡಾದ ಅದನ್ನು ಕಡೆಗಣಿಸಬೇಡಿ. ಇದು ಆತ್ಮಹತ್ಯೆ ಮಾಡಿಕೊಳ್ಳುವಂಥ ಗಂಭೀರ ಸಮಸ್ಯೆ ಏನಲ್ಲ ಎಂದ ಭಾವಿಸಬೇಡಿ. ನಿಮಗೆ ಅದು ಗಭೀರವಲ್ಲದಿದ್ದರೂ ಅವರು ಅದನ್ನು ಹೇಗೆ ಸ್ವೀಕರಿಸಿದ್ದಾರೆ ಎನ್ನುವುದು ಮುಖ್ಯವಾಗುತ್ತದೆ. ಜೀವನಕ್ಕೆ ಹೆದರಿ ಆತ್ಮಹತ್ಯೆಗೆ ಶರಣಾಗುವವರಿಗೆ ಜೀವನ ಬೆಲೆ ತಿಳಿದಿರುವುದಿಲ್ಲ. ಅವರಿಗೆ ಸಣ್ಣ ವಿಷಯವೂ ದೊಡ್ಡದಾಗಿಯೇ ಕಾಣುತ್ತದೆ.

## 10-9-2025 ದಿನ ಭವಿಷ್ಯ

**ಮೇಷ:** ಕೆಲಸದ ಒತ್ತಡ ಇಂದು ಸ್ವಲ್ಪ ಒತ್ತಡ ತರಬಹುದು. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ಮಕ್ಕಳು ನಿಮ್ಮ ಗೃಹಕೃತ್ಯಗಳನ್ನು ಮುಗಿಸುವಲ್ಲಿ ನಿಮಗೆ ಸಹಾಯ ಮಾಡುತ್ತಾರೆ. ತಮ್ಮ ಬಿಡುವಿನ ವೇಳೆಯಲ್ಲಿ ಈ ರೀತಿಯ ಚಟುವಟಿಕೆಗಳನ್ನು ಮಾಡಲು ಅವರಿಗೆ ಪ್ರೋತ್ಸಾಹಿಸಿ.

**ವೃಷಭ:** ನೀವು ಇದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು।.

**ಮಿಥುನ:** ಮನೆಯಲ್ಲಿ ಕೆಲಸ ಮಾಡುವಾಗ ವಿಶೇಷ ಎಚ್ಚರ ವಹಿಸಿ. ಮನೆ ಬಳಕೆಯ ವಸ್ತುಗಳ ಯಾವುದೇ ಅಸಡ್ಡೆಯ ಬಳಕೆ ನಿಮಗೆ ಸಮಸ್ಯೆ ಉಂಟುಮಾಡಬಹುದು. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ. ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ನೀವು ಪ್ರೀತಿಸುವವರ ಜೊತಗಿನ ತಪ್ಪು ಕಲ್ಪನೆಯನ್ನು ಪರಿಹರಿಸಲಾಗುತ್ತದೆ.

**ಕರ್ಕಾಟಕ:** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನಿಮ್ಮ ಸಮರ್ಪಣೆ ಮತ್ತು ಶ್ರಮವನ್ನು ಗಮನಿಸಲಾಗುತ್ತದೆ ಮತ್ತು ಇಂದು ನಿಮಗೆ ಸ್ವಲ್ಪ ಆರ್ಥಿಕ ಪ್ರತಿಫಲಗಳನ್ನು ತರುತ್ತದೆ. ಕುಟುಂಬದಲ್ಲಿ ತೊಂದರೆಯುಂಟಾಗಬಹುದು. ಕುಟುಂಬದ ಜವಾಬ್ದಾರಿಗಳ ಬಗ್ಗೆ ನಿಮ್ಮ ಉದಾಸೀನತೆ ಅವರಿಗೆ ಸಿಟ್ಟು ತರಬಹುದು.

**ಸಿಂಹ:** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಹಣದ ಕೊರತೆ ಇಂದು ನಿಮ್ಮ ಮನೆಯಲ್ಲಿ ಅಪಶ್ರುತಿಗೆ ಕಾರಣವಾಗ ಬಹುದು. ಅಂತಹ ಪರಿಸ್ಥಿತಿಯಲ್ಲಿ ನೀವು ನಿಮ್ಮ ಮನೆಯವರೊಂದಿಗೆ ಯೋಚಿಸಿ ಅರ್ಥಮಾಡಿಕೊಂಡು ಮಾತನಾಡಿ ಮತ್ತು ಅವರಿಂದ ಸಲಹೆಯನ್ನು ತೆಗೆದುಕೊಳ್ಳಿ.

ಕನ್ಯಾ: ನಿಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳನ್ನು ತನ್ನಿ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಕುಟುಂಬದ ಸದಸ್ಯರ ಖುಷಿಯ ಸ್ವಭಾವ ಮನೆಯಲ್ಲಿನ ವಾತಾವರಣವನ್ನು ಹಗುರಗೊಳಿಸುತ್ತದೆ. ಇಂದು ನೀವು ನಿಮ್ಮ ಅತ್ಯುತ್ತಮ ನಡವಳಿಕೆಯನ್ನು ಹೊಂದಿರಬೇಕು – ಏಕೆಂದರೆ ನಿಮ್ಮ ಪ್ರೇಮಿ ಅಸಮಾಧಾನಗೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ತುಲಾ: ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು.

**ವೃಶ್ಚಿಕ:** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು.

**ಧನು:** ಮಕ್ಕಳ ನಿಮ್ಮ ಸಂಜೆಯನ್ನು ಉಲ್ಲಾಸಮಯವಾಗಿಸುತ್ತಾರೆ. ಮಂಕು ಕವಿದ ಮತ್ತು ಒತ್ತಡದ ದಿನಕ್ಕೆ ಮಂಗಳ ಹಾಡಲು ಒಂದು ಸಂತೋಷಕೂಟವನ್ನು ಯೋಜಿಸಿ. ಮಕ್ಕಳ ಸಾಂಗತ್ಯ ನಿಮ್ಮ ದೇಹವನ್ನು ಪುನಃಶ್ಚೇತನಗೊಳಿಸುತ್ತದೆ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಕುಟುಂಬದ ಸದಸ್ಯರೊಂದಿಗೆ ಸಾಮಾಜಿಕ ಕೂಟ ಎಲ್ಲರನ್ನೂ ಒಳ್ಳೆಯ ಚಿತ್ತದಲ್ಲಿಡುತ್ತದೆ.

**ಮಕರ:** ನಿಮ್ಮ ಸಂಗಾತಿಯ ಅಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲವಾಗಿಸಬಹುದು. ಆರ್ಥಿಕ ದೃಷ್ಟಿಯಿಂದ ಇಂದಿನ ದಿನ ಮಿಶ್ರವಾಗಿ ಉಳಿಯುತ್ತದೆ. ಇಂದು ನೀವು ಹಣದ ಪ್ರಯೋಜನವನ್ನು ಪಡೆಯಬಹುದು ಆದರೆ ಇದಕ್ಕಾಗಿ ನೀವು ಕಠಿಣ ಪರಿಶ್ರಮ ಮಾಡಬೇಕಾಗುತ್ತದೆ. ಕೌಟುಂಬಿಕ ಕಾರ್ಯಗಳು ಮತ್ತು ಪ್ರಮುಖ ಸಮಾರಂಭಗಳಿಗೆ ಪವಿತ್ರವಾದ ದಿನ.

**ಕುಂಭ:** ಹಳೆಯ ಸ್ನೇಹಿತರ ಜೊತೆಗಿನ ಒಂದು ಪುನರ್ಮಿಲನ ನಿಮ್ಮನ್ನು ಚೇತೋಹಾರಿಯಾಗಿರಿಸುತ್ತದೆ. ನಿಮ್ಮ ಬಳಿ ಹೆಚ್ಚು ಹಣವಿಲ್ಲ ಎಂದು ಯೋಚಿಸಿದರೆ, ಇಂದು ಮನೆಯ ದೊಡ್ಡವರಿಂದ ಹಣವನ್ನು ಸಂಗ್ರಹಿಸುವ ಸಲಹೆ ತೆಗೆದುಕೊಳ್ಳಿ. ನಿಮ್ಮ ಜೊತಗಿರುವವರ ಜೊತೆ ವಾದವಿವಾದಕ್ಕೆ ತೊಡಗಬೇಡಿ. ನಿಮ್ಮ ನೋಟ ಮತ್ತು ವ್ಯಕ್ತಿತ್ವವನ್ನು ಸುಧಾರಿಸಲು ಮಾಡಿದ ಯತ್ನಗಳು ನಿಮಗೆ ತೃಪ್ತಿ ನೀಡುತ್ತವೆ.

**ಮೀನ:** ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಏಕೆಂದರೆ ನೀವು ಅದನ್ನು ಮಾಡದಿದ್ದರೆ ಅವರ ಆರೋಗ್ಯವು ಹದಗೆಡಬಹುದು ಮತ್ತು ಅವರ ಆರೋಗ್ಯದ ಮೇಲೆ ಬಹಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆರೋಗ್ಯ ಚೆನ್ನಾಗಿಲ್ಲದ ಒಬ್ಬ ಸಂಬಂಧಿಯನ್ನು ಭೇಟಿ ಮಾಡಿ.

# ಪಾಲಿಥೀನ್ ಮಲ್ಚಿಂಗ್-ಅಧಿಕ ಇಳುವರಿಗೆ ಸಹಾಯಕ

ಕಳೆ ನಿಯಂತ್ರಣ, ತೇವಾಂಶ ಸಂರಕ್ಷಣೆ ಮಣ್ಣು ಶೀತವಾಗುವುದರಿಂದ ತಡೆಯಲು ಮಣ್ಣಿಗೆ ಪಾಲಿಥ್ಹೀನ್ ಹೊದಿಕೆ ಹಾಕುವುದು ಉತ್ತಮ ಬೆಳೆ ವಿಧಾನ. ಮಳೆಗಾಲದಲ್ಲಿ ತರಕಾರಿ ಬೆಳೆಸುವ ರೈತರು, ಬೇಸಿಗೆಯಲ್ಲಿ ತರಕಾರಿ ಬೆಳೆಸುವವರು, ತೋಟಗಾರಿಕಾ ಬೆಳೆಗಳಾದ ಹಣ್ಣು ಹಂಪಲು ಬೆಳೆಸುವವರು ಎದುರಿಸುವ ಅತೀ ದೊಡ್ಡ ಸಮಸ್ಯೆಗಳೆಂದರೆ ಕಳೆ ಬೆಳೆಯುವುದು. ಕಳೆ ನಿಯಂತ್ರಣವನ್ನು ಮಾನವ ಶ್ರಮದಲ್ಲಿ ಮಾಡುವುದಾದರೆ ಆ ಬೆಳೆ ಖಂಡಿತವಾಗಿಯೂ ಲಾಭದಾಯಕವಾಗುವುದಿಲ್ಲ. ಕಳೆಗಳನ್ನು ಇತರ ವಿಧಾನಗಳಿಂದ ನಿಯಂತ್ರಣ ಮಾಡುವುದು ಸಹ ದುಬಾರಿ ಮತ್ತು ಅಚಾತುರ್ಯಕ್ಕೆ ಆಸ್ಪದ.



ಮಳೆ ಅಧಿಕ ಪ್ರಮಾಣದಲ್ಲಿ ಬರುವ ಕಡೆಗಳಲ್ಲಿ ಕಳೆಗಳ ಬೆಳವಾಣಿಗೆ ಜಾಸ್ತಿ. ಯಾವುದೇ ತರಕಾರಿ ಕೃಷಿ ಮಾಡಿದರೂ ಕಳೆ ನಿಯಂತ್ರಣ ಕಷ್ಟ. ಅಷ್ಟೇ ಅಲ್ಲದೆ ಮಳೆಯ ಭಾರದ ನೀರಿನ ಹನಿಗಳಿಂದ ಮಣ್ಣು ಕೊಚ್ಚಣೆಗೊಳಗಾಗುತ್ತದೆ. ಇದನ್ನು ತಡೆಯುವುದಕ್ಕೆ ಮಳೆಗಾಲದ ಎತ್ತರಿಸಿದ ಸಾಲುಗಳಿಗೆ ಪಾಲಿಥೀನ್ ಹೊದಿಕೆಯನ್ನು ಹಾಕುವುದು ಉತ್ತಮ. ಇದು ಕಳೆ ಬೆಳವಣಿಗೆಯನ್ನು ನಿಲ್ಲಿಸುತ್ತದೆ. ಮಳೆ ನೀರಿನ ದೊಡ್ಡ ಹನಿಗಳು ನೇರವಾಗಿ ಮಣ್ಣಿಗೆ ಬೀಳುವಾಗ ಮಣ್ಣು ಕೊಚ್ಚಣೆಯಾಗಿ ಫಲವತ್ತತೆ ತೊಳೆದು ಹೋಗುತ್ತದೆ. ಹೆಚ್ಚಿನೆಲ್ಲಾ ರೋಗ ಕಾರಕ ಜೀವಿಗಳು, ಮಣ್ಣಿನ ಮೂಲಕ ಸಸ್ಯಕ್ಕೆ ಹಾನಿಯನ್ನುಂಟುಮಾಡುತ್ತವೆ. ಮಳೆ ಹನಿಗಳು ಮಣ್ಣಿನ ಮೇಲೆ ಬಿದ್ದಾಗ ಮಣ್ಣು ಸಿಡಿದು ಎಲೆಗಳ – ಕಾಂಡದ ಮೇಲೆ ಅಂಟಿಕೊಂಡು ರೋಗವನ್ನುಂಟು ಮಾಡುತ್ತದೆ. ಅಧಿಕ ಶೀತ ವಾತಾವರಣ ಇರುವಾಗ ರೋಗಕಾರಕಗಳ ಚಟುವಟಿಕೆ ಹೆಚ್ಚು.

ಇಂತಹ ಕಡೆ ಪಾಲಿಥೀನ್ ಹೊದಿಕೆ ಹಾಕುವುದರಿಂದ ಮಣ್ಣು ಬೆಚ್ಚಗೆ ಇರುವಂತೆ ಮಾಡುತ್ತದೆ. ಬೇರು ಬೆಳವಣಿಗೆಗೆ ಇದು ಅನುಕೂಲವಾಗುತ್ತದೆ. ಯಾವುದೇ ರೀತಿಯಲ್ಲಿ ಮಣ್ಣು ಕೊಚ್ಚಣೆ ಉಂಟಾಗುವುದಿಲ್ಲ. ಕಳೆ ಬೆಳವಣಿಗೆ ಇಲ್ಲದಾಗುತ್ತದೆ.

ಮಳೆಗಾಲ ಪ್ರಾರಂಭದಲ್ಲಿ ಸಾಲು ಮಾಡುವಾಗ ಸಾಕಷ್ಟು ಕೊಟ್ಟಿಗೆ ಗೊಬ್ಬರಗಳನ್ನು ಪೂರೈಕೆ ಮಾಡಿ ಆಗಲೇ ಪಾಲಿಥೀನ್ ಶೀಟನ್ನು ಹಾಕಿ ಸಸಿ – ಇಲ್ಲವೇ ಬೀಜವನ್ನು ಬಿತ್ತನೆ ಮಾಡಬೇಕು. ಒಂದು ವೇಳೆ ಈಗಾಗಲೇ ಸಾಲು ಮಾಡಿ ಸಸಿ ಮಾಡಿದ್ದೇ ಆದರೆ ಅಂತವರು ಪಾಲಿಥೀನ್ ಶೀಟುಗಳನ್ನು ಸಾಲಿನ ಮೇಲೆ ಸಸಿ ಇರುವ ಕಡೆ ತುಂಡು ಮಾಡಿ ಹಾಕಬಹುದು.

ಪಾಲಿಥೀನ್ ಶೀಟು ಹೊದಿಸಿ ಬೆಳೆ ಬೆಳೆಸುವುದರಿಂದ ಕೊಟ್ಟ ಗೊಬ್ಬರದ ಲಭ್ಯತೆ ಹೆಚ್ಚಾಗುತ್ತದೆ. ಸಸ್ಯ ಬೆಳವಣಿಗೆ ಉತ್ತಮವಾಗಿ ಇಳುವರಿ ಹೆಚ್ಚಳವಾಗುತ್ತದೆ. ತರಕಾರಿ ಬೆಳೆಗಾರರು ಹೆಚ್ಚಾಗಿ ಕಳೆ ನಿಯಂತ್ರಣಕ್ಕೆ ಮತ್ತು ಸಸ್ಯಗಳಿಗೆ ಬೆಳವಣಿಗೆಗೆ ಅನುಕೂಲವಾಗಲೆಂದು ಮೊದಲು ಎತ್ತರಿಸಿದ ಸಾಲು ಮಾಡಿ ಸುಮಾರು 1 ತಿಂಗಳಲ್ಲಿ ಮತ್ತೊಮ್ಮೆ ಸಾಲಿಗೆ ಮಣ್ಣು ಏರಿಸುತ್ತಾರೆ. ಈ ಖರ್ಚು ದುಬಾರಿಯದ್ದಾಗಿದ್ದು, ಪಾಲಿಥೀನ್ ಮಲ್ಚಿಂಗ್ ಮಾಡುವಾಗ ಎರಡನೇ ಬಾರಿ ಮಣ್ಣು ಏರಿಸುವ ಖರ್ಚು ಉಳಿತಾಯವಾಗುತ್ತದೆ. ಮೊದಲು ಮಣ್ಣು ಏರಿಸುವಾಗಲೇ ಸ್ವಲ್ಪ ಹೆಚ್ಚು ಮಣ್ಣು ಏರಿಸಿಕೊಂಡರೆ ಸಾಕಾಗುತ್ತದೆ.

ಮಳೆ ಕಡಿಮೆ ಇರುವ ಪ್ರದೇಶಗಳಲ್ಲಿ ತೇವಾಂಶ ಸಂರಕ್ಷಣೆ- ಕಳೆ ನಿಯಂತ್ರಣದ ಉದ್ದೇಶಕ್ಕಾಗಿ ಪಾಲಿಥೀನ್ ಶೀಟುಗಳನ್ನು ಹೊದಿಸಬೇಕು. ಪಾಲಿಥೀನ್ ಶೀಟುಗಳನ್ನು ಹೊದಿಸುವುದರಿಂದ ಮಣ್ಣಿನ ತೇವಾಂಶದ ಆವೀಕರಣ ಶೇ.60 ಕ್ಕೂ ಹೆಚ್ಚು ಕಡಿಮೆಯಾಗುತ್ತದೆ. ಗಾಳಿಯಿಂಗಾಗುವ ಮಣ್ಣುಸವಕಳಿ ಕಡಿಮೆಯಾಗುತ್ತದೆ.

ಪಾಲಿಥೀನ್ ಶೀಟುಗಳನ್ನು ಹೊದಿಸಲು ಅಂಥಃ ಖರ್ಚು ಬರುವುದಿಲ್ಲ. ಒಂದು ಚದರ ಮೀಟರ್ ವಿಸ್ತೀರ್ಣಕ್ಕೆ ಸುಮಾರು 5 ರೂ. ಖರ್ಚು ತಗಲುತ್ತದೆ. ಅದಕ್ಕಿಂತ ಹೆಚ್ಚಿನ ಲಾಭ ಇಳುವರಿ ಹೆಚ್ಚಳದ ಮೂಲಕ- ಕಳೆ ನಿಯಂತ್ರಣ ಕೆಲಸ ಇಲ್ಲದೆ, ಮತ್ತು ಅಂತರ ಬೇಸಾಯದ ಖರ್ಚು ಇಲ್ಲದೆ ಮರಳಿ ಬರುತ್ತದೆ. ಚಳಿಗಾಲದ ಬೆಳೆಗೆ ಅಗಸ್ಟ್-ಸಪ್ಟೆಂಬರ್ ತಿಂಗಳಲ್ಲಿ ಬೆಳೆ ಪ್ರಾರಂಭಿಸುವುದಾದಲ್ಲಿ ಪಾಲಿಥೀ ಹೊದಿಕೆ ಹಾಕಿ ಬೆಳೆ ಬೆಳೆಸಿದರೆ ನಂತರ ಬೆಳೆ ಮಾಗುವ ತನಕವೂ ನೀರಾವರಿ ಮಾಡಬೇಕಾಗಿಲ್ಲ. ಮಣ್ಣಿನಲ್ಲಿದ್ದ ತೇವಾಂಶವನ್ನು ಆವೀಕರಣ ಆಗದಂತೆ ತಡೆದು ಬೆಳೆಗಳಿಗೆ ಬೇಕಾದಷ್ಟು ಲಭ್ಯವಾಗುವಂತೆ ಮಾಡುತ್ತದೆ. ಬೇಸಿಗೆಯಲ್ಲಿ ಪಾಲಿಥೀನ್ ಶೀಟುಗಳನ್ನು ಹೊದಿಸುವಾಗ ಹನಿ ನೀರಾವರಿಯ ಕೊಳವೆಗಳನ್ನು ಸಾಲಿನ ಮೇಲೆ ಹಾಕಿ ಅದರ ಮೇಲೆ ಪಾಲಿಥೀನ್ ಶೀಟುಗಳನ್ನು ಹೊದಿಸಬೇಕು.

ಯಾವ ಯಾವ ಬೆಳೆಗೆ ಪಾಲಿಥೀನ್ ಮಲ್ಚಿಂಗ್ ಮಾಡಬಹುದು?

ಎಲ್ಲಾ ನಮೂನೆಯ ತರಕಾರಿ ಬೆಳೆಗಳಿಗೂ ಪಾಲಿಥೀನ್ ಮಲ್ಚಿಂಗ್ ಹೊಂದಾಣಿಕೆಯಾಗುತ್ತದೆ. ಬದನೆ, ಬೆಂಡೆ, ಹೀರೆ, ಮೆಣಸು ಕಲ್ಲಂಗಡಿ, ಕರಬೂಜ, ಬೀನ್ಸ್, ಅಲಸಂಡೆ, ಸಿಹಿ ಗೆಣಸು ಎಲ್ಲದಕ್ಕೂ ಮಲ್ಚಿಂಗ್ ಮಾಡಬಹುದು.

**– ರಾಧಾಕೃಷ್ಣ** ಹೊಳ್ಳ



# ಸವಿ ನೆನಪುಗಳು ಬೇಕು



ಶಬ್ದ ಅಥವಾ ಧ್ವನಿ ಕ್ರಮಬದ್ಧತೆಯ – ಶಿಸ್ತುಬದ್ಧತೆಯ ತರಂಗಗಳನ್ನು ಸಂಗೀತ ಎಂದು ಗ್ರಹಿಸಬಹುದೇ? ಅಥವಾ ಆ ಶಬ್ದಗಳ ಸುಶ್ರಾವ್ಯತೆ ಮಾತ್ರ ಸಂಗೀತವೇ? ಅಥವಾ ಧ್ವನಿ ಮತ್ತು ವಾದ್ಯಗಳ ಸಮ್ಮಿಲನದ ಭಾಷೆಗೆ ಸಂಗೀತ ಎನ್ನಬಹುದೇ? ಅಥವಾ ಸಾಹಿತ್ಯ ಧ್ವನಿ ವಾದ್ಯಗಳ ಮಿಲನದ ಪ್ರಕ್ರಿಯೆಯೇ ಸಂಗೀತವೇ? ಅಥವಾ ಧ್ವನಿಯ ಸ್ವರ ಲಯ ತಾಳಗಳ ರೂಪವೇ ಸಂಗೀತ ಸೃಷ್ಟಿಸುತ್ತದೆಯೇ? ಅದರ ನಿಜವಾದ ಅರ್ಥ ಏನೇ ಇರಲಿ ಮನುಷ್ಯ ಜೀವಿಯ ಬದುಕಿನಲ್ಲಿ ಅತಿಹೆಚ್ಚು ಆಕರ್ಷಕ ಧ್ವನಿ ಎಂದರೆ ಅದು ಸಾಮಾನ್ಯವಾಗಿ ಹಾಡುಗಳು ಎಂದು ಕರೆಯಲ್ಪಡುವ ಧ್ವನಿ ತರಂಗಗಳು. ಬಹುಶಃ ಹುಟ್ಟಿದ ಮಗುವಿನಿಂದ ವೃದ್ದರವರೆಗೆ ಒಂದಲ್ಲ ಒಂದು ರೀತಿಯ ಹಾಡುಗಳ ಮೋಹ ಅವರ ಮನಸ್ಸುಗಳ ಮೇಲೆ ಪ್ರಭಾವ ಬೀರುವುದನ್ನು ಕಾಣಬಹುದು.

ಕೇವಲ ಭಾರತ ದೇಶ ಮಾತ್ರವಲ್ಲ ಇಡೀ ಸೃಷ್ಟಿಯ ಮನುಷ್ಯ ಪ್ರಾಣಿಯ ಎಲ್ಲರಿಗೂ ಇದು ಅನ್ವಯಿಸುತ್ತದೆ. ಭಾಷೆಗಳನ್ನು ಮೀರಿ ಅನೇಕ ವೈವಿಧ್ಯಮಯ ಪ್ರಕಾರಗಳಲ್ಲಿ ಇದು ಅಸ್ತಿತ್ವದಲ್ಲಿದೆ. ಜನಪದವೇ ಇರಲಿ, ಪಾಶ್ಚಿಮಾತ್ಯವೇ ಇರಲಿ, ಮಧ್ಯಪ್ರಾಚ್ಯದ ಅಥವಾ ಆಫ್ರಿಕಾದ ಸಂಗೀತವೇ ಇರಲಿ ಒಟ್ಟಿನಲ್ಲಿ ಹಾಡುಗಳು ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ಅದು ಎಲ್ಲಾ ಕಾಲಮಾನಗಳನ್ನು ಮೀರಿ ಬೆಳೆದಿದೆ. ಆಧುನಿಕತೆ ಮತ್ತು ತಂತ್ರಜ್ಞಾನ ಬೆಳೆದಂತೆ ಮುಖ್ಯವಾಗಿ ಸಿನಿಮಾ ರಂಗದ ಅಭಿವೃದ್ಧಿಯೊಂದಿಗೆ ಈ ಕ್ಷಣದಲ್ಲಿ ಹಾಡುಗಳು ಉತ್ತುಂಗಕ್ಕೇರಿದೆ.

ಸಂಕೀರ್ಣ ಬದುಕಿನ ಜಂಜಡಗಳಿಂದ ನರಳುತ್ತಿರುವ ಮನುಷ್ಯ ಮನರಂಜನೆ ಅಥವಾ ಮನಸ್ಸುಗಳ ಪುನಶ್ಚೇತನಕ್ಕಾಗಿ ಸಂಗೀತದ ಮೊರೆ ಹೋಗುವುದು ಸಾಮಾನ್ಯವಾಗಿ ನಾವು ಗಮನಿಸಿದ್ದೇವೆ ಮತ್ತು ಅನುಭವಿಸಿದ್ದೇವೆ. ಸಪ್ತ ಸ್ವರಗಳ ಸಹಾಯದಿಂದ ನವರಸಗಳನ್ನು ಹೊಮ್ಮಿಸುವ ಸಂಗೀತ ನಮ್ಮ ಭಾವನೆಗಳೊಂದಿಗೆ ಅಲೆಅಲೆಯಾಗಿ ತೇಲುತ್ತಾ ಸಾಗುವ ಪರಿ ಅನನ್ಯ. ಎಷ್ಟೋ ಪ್ರೇಮಿಗಳಿಗೆ, ಎಷೋ ವಿರಹಿಗಳಿಗೆ, ಎಷ್ಟೋ ನೋವುಂಡವರಿಗೆ, ಎಷ್ಟೋ ಕನಸುಗಾರರಿಗೆ, ಎಷ್ಟೋ ನಿರಾಶಾವಾದಿಗಳಿಗೆ, ಎಷ್ಟೋ ಹೃದಯಹೀನರಿಗೆ ಒಂದು ಹಾಡು ಆ ಕ್ಷಣದ ಜೀವ ದ್ರವ್ಯ.


ಭಾವನೆಗಳು ಅಕ್ಷರ ರೂಪದ ಸಾಹಿತ್ಯವಾಗಿ ಮೂಡಿದ ಮೇಲೆ ಆ ಅಕ್ಷರಗಳು ಮತ್ತೆ ಭಾವನೆಗಳಾಗಿ ಹಾಡಿನ ಮೂಲಕ ಪರಿವರ್ತನೆ ಹೊಂದಿ ಕೆಲವೊಮ್ಮೆ ಮತ್ತೆ ಅಕ್ಷರಗಳಾಗಿ ಮತ್ತೆ ಭಾವನೆಗಳಾಗುವ ಸರಪಳಿಯ ಕೊಂಡಿಯೇ ಅತ್ಯದ್ಭುತ. ಕೆಲವು ಅಪರೂಪದ ಸ್ವಾಭಾವಿಕ ಪ್ರತಿಭೆಗಳು ಎಲ್ಲಾ ಕ್ಷೇತ್ರಗಳಲ್ಲೂ ಉದಯಿಸಿವೆ. ಹೆಚ್ಚು ಶ್ರಮವಿಲ್ಲದೆ, (ಅವರ ಪ್ರತಿಭೆಯ ಕಾರಣದಿಂದಾಗಿ) ಆದರೆ ಶ್ರದ್ದೆ ಮತ್ತು ಸಮರ್ಪಣಾ ಮನೋಭಾವದಿಂದ ತುಂಬಾ ಸರಳವಾಗಿ ಆ ಪ್ರತಿಭೆಯನ್ನು ದುಡಿಸಿಕೊಂಡಿದ್ದಾರೆ. ಸುಖದ ಅನುಭವ ನಮಗೆ ಆಗಬೇಕಾದರೆ ಕಷ್ಟದ ಅರಿವು ಸಹ ಇರಲೇಬೇಕು ಎಂಬ ಸಮಧಾನದೊಂದಿಗೆ ಬದುಕಿನ ಪಯಣದಲ್ಲಿ ಅನೇಕರಿಗೆ ಲಲಿತ ಕಲೆಗಳು ಸ್ಫೂರ್ತಿ ಪ್ರೇರಣೆ ಪ್ರಭಾವವನ್ನು ಹೊಂದುವ ಬಗೆಯನ್ನು ನೆನೆಯುತ್ತಾ ನಮ್ಮೆಲ್ಲರ ಬದುಕಿನ, ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ...

**– ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ಈಗ ಕುಡಿಯುವ ಕೊಳವೆ ನೀರೂ ಸಹ ವಿಷವೇ?

ಬರಗಾಲದ ಭೀಕರತೆಯಿಂದಾಗಿ ನೀರು ಎಲ್ಲಿಯೂ ಸಕ್ಕುವುದಿಲ್ಲ ಹಳ್ಳಕೊಳ್ಳ ತೊರೆ, ನದಿಗಳು ಬತ್ತಿಹೋಗಿವೆ. ಇಂಥಹ ಸಂದರ್ಭಗಳಲ್ಲಿ ಕೊಳವೆಭಾವಿಗಳನ್ನು ಕೊರೆದು ಅದರಿಂದ ನೀರು ಸಂಗ್ರಹಿಸಿ ಕುಡಿಯಲು ಉಪಯೋಗಿಸುತ್ತಿರುವುದು ಇಂದು ಸಾಮಾನ್ಯ ದೃಷ್ಯ.

ಆದರೆ ಇಂಥಹ ಕೊಳವೆ ಭಾವಿಗಳ ನೀರು ವಿಷಯುಕ್ತವಾಗಿವೆ ಎಂಬ ಸತ್ಯ ಇತ್ತೀಚಿಗೆ ಬಯಲಾಗುತ್ತಲಿದೆ. ನಗರೀಕರಣದ ಒತ್ತಡದಿಂದಾಗಿ ಸುರಂಗಗಳನ್ನು ತೋಡಿ ನೀರು ತೆಗೆಯುವ ಸಾಹಸದಿಂದಾಗಿ ಅಂತಾರ್ಜಲ ಬತ್ತಿಹೋಗುತ್ತಲಿದೆ. ಹೀಗಾಗಿ ಈ ಸುರಂಗ ಭಾವಿಗಳನ್ನು 100 ರಿಂದ 500 ಅಡಿಗಳವರೆಗೂ ಕೊರೆಯಲಾಗುತ್ತದೆ. ಇದು ತೀವ್ರವಾಗತೊಡಗಿದಂತೆ ಆರ್ಸನಿಕ್, ಅಂಶವು ಹೆಚ್ಚಿನ ಪ್ರಮಾಣದಲ್ಲಿ ಅಂತರಜಲದ ಜೊತೆಗೆ ಸೇರಿಕೊಳ್ಳುತ್ತದೆ. ಥೈಲ್ಯಾಂಡಿನಂತಹ ದೇಶಗಳು ಈ ಹಿಂದೆಯೇ ಆರ್ಸನಿಕ್, ವಿಷಪ್ರಾಶನದಿಂದ ಬಳಲಿ ಪಾಠ ಕಲಿತಿವೆ. ಥೈಲ್ಯಾಂಡಿನ ಕೆಲವು ಪ್ರದೇಶಗಳಲ್ಲಿ ಮಳೆಯ ನೀರನ್ನು ಸಿಮೆಂಟ್ ಜಾಡಿಗಳಲಿ ಸಂಗ್ರಹಿಸಿ ಬಳಸಿಕೊಳ್ಳಲಾಗುತ್ತದೆ. ಅಲ್ಲಿ ವರ್ಷದ ಹತ್ತು ತಿಂಗಳ ಕಾಲ ಕುಡಿಯಲು ಮತ್ತು ಅಡಿಗೆ ತಯಾರಿಕೆಗೆ ಬೇಕಾಗುವ ನೀರನ್ನು ಇಂಥಹ ಮಳೆಯ ನೀರಿನ ಸಂಗ್ರಹದಿಂದಲೇ ಪೂರೈಸಿಕೊಳ್ಳಲಾಗುತ್ತದೆ. ಪಶ್ಚಿಮ ಬಂಗಾಳದ 840 ಹಳ್ಳಿಗಳಲ್ಲಿ ಲಕ್ಷಾಂತರ ಜನರು ಆರ್ಸನಿಕ್ ವಿಷ ಪ್ರಾಶನದಿಂದ ನರಳುತ್ತಿದ್ದಾರೆ. ನೆಲದಾಳದಲ್ಲಿರುವ ಕಬ್ಬಿಣದ ಪೈರೈಟ್ಗಳು ಕೊಳವೆ ಭಾವಿಗಳ ಮೂಲಕ ಆಮ್ಲಜನಕದ ಸಂಪರ್ಕಕ್ಕೆ ಬಂದಾಗ ಅಪಾಯಂಕಾರಿಯಾದ ಆರ್ಸನಿಕ್ ಬಿಡುಗಡೆ ಹೊಂದಿ ಅಂತರ್ಜಲವನ್ನು ಸೇರುತ್ತದೆ. ನೀರಿನೊಂದಿಗೆ ಸೇರುವ ಈ ಆರ್ಸನಿಕ್ ಮನುಷ್ಯರಿಗೂ, ಪ್ರಾಣಿಗಳಿಗೂ ಅತ್ಯಂತ ಅಪಾಯಕಾರಿಯಾಗಿದೆ.



ಸಾಮಾನ್ಯವಾಗಿ ಇಂತಹ ಸಮಸ್ಯಗಳಿಗೆ ಸರಳವಾದ ಸುಲಭವಾದ ಮತ್ತು ಕಡಿಮೆ ಖರ್ಚಿನ ಮಾರ್ಗಗಳಿವೆ. ಆದರೆ ಹಲವಾರು ಕಾರಣಗಳಿಂದಾಗಿ ಇಂಥಹ ಪರ್ಯಾಯ ವ್ಯವಸ್ಥೆಗೆ ಒಪ್ಪಿಗೆ ಸಿಗುವುದಿಲ್ಲ ಮುಖ್ಯವಾಗಿ ಮಳೆ ನೀರನ್ನು ಸಂಗ್ರಹಿಸಿ ಇರುವುದು. ಜಲಮೂಲಗಳಿಂದ ನೀರನ್ನು ಪಡೆಯುವುದು. ಮುಂತಾದ ಕ್ರಮಗಳನ್ನು ಅನುಸರಿಸಬೇಕಿದೆ.

# ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ: ಸಿದ್ಧತೆಗೆ ಕ್ರಮ ವಹಿಸಿ

• ಪ್ರಜೋದಯ ವರದಿ


**ಹಾಸನ:** ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಕಾಲ ಕಾಲಕ್ಕೆ ನೀಡಲಾಗುವ ಮಾರ್ಗಸೂಚಿ, ಆದೇಶ, ನಿರ್ದೇಶನದನ್ವಯ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಮನ್ವಯದೊಂದಿಗೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲು ಅಗತ್ಯ ಸಿದ್ಧತೆಗೆ ಕ್ರಮ ವಹಿಸಲು ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಕರ್ನಾಟಕ ರಾಜ್ಯದ ನಾಗರೀಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷಾ ಕಾರ್ಯ ಕುರಿತು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಿದ್ಧತೆಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಯೋ ಟ್ಯಾಗ್ ಮಾಡಿ, ಮನೆಗಳಿಗೆ ಸ್ಟಿಕರ್ ಅಂಟಿಸಲು ಕ್ರಮ ವಹಿಸಲು ಚೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.

ಗಣತೀದಾರರು ಮತ್ತು ಮೇಲ್ವಿಚಾರಕರ ಮಾಹಿತಿಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಹಾಗೂ ಆಯಾ ತಾಲ್ಲೂಕಿನ ತಹಶೀಲ್ದಾರ್ ರವರಿಗೆ ನೀಡಲು ಮತ್ತು ರಾಜ್ಯ ಮಟ್ಟದ ಮಾಸ್ಟರ್ ಟ್ರೈನರ್ಸ್ ತರಬೇತಿಗೆ ನಿಯೋಜನೆ ಮಾಡಲು ಕ್ರಮ ವಹಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಮತ್ತು ಜಿಲ್ಲೆಯ ಎಲ್ಲಾ ಬಿ.ಇ.ಓ ಗಳಿಗೆ ಸೂಚಿಸಿದರು.

ರಾಜ್ಯ ಮಟ್ಟದ ಮಾಸ್ಟರ್ ಟ್ರೈನಸ್‌ಗಳಿಂದ ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲು ಕ್ರಮವಹಿಸುವಂತೆ ಜಿಲ್ಲೆಯ ಎಲ್ಲಾ ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಬಿ.ಇ.ಓ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಅವರಿಗೆ ತಿಳಿಸಿದರು.

ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನಸ್‌ಗಳಿಂದ ಗಣತೀದಾರರಿಗೆ ಮತ್ತು ಮೇಲ್ವಿಚಾರಕರಿಗೆ ಸೆ.12 ರಿಂದ 19 ರೊಳಗೆ ಯಾವುದಾದರೂ 02 ದಿನಗಳಲ್ಲಿ ತರಬೇತಿ ನೀಡಲು ಕ್ರಮ ವಹಿಸುವಂತೆ ತಿಳಿಸಿದರು.



ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಸೆ.22 ರಿಂದ ಅ.7 ರವರೆಗೆ ನಡೆಸಲು ಸೂಚಿಸಿದರು.

ವಿದ್ಯುತ್ ಸಂಪರ್ಕವಿಲ್ಲದಿರುವ ಹಾಗೂ ನೆಟ್ವರ್ಕ್ ಇಲ್ಲದಿರುವ ಹಾಡಿ, ಗುಡಿಸಲು, ಶ್ಯಾಡೋ ಮನೆಗಳು, ಅಲೆಮಾರಿ/ ಅರೆ ಜನಾಂಗದವರ ಅಲೆಮಾರಿ ಜನಾಂಗದವರ ಟೆಂಟ್‌ಗಳು ಇತ್ಯಾದಿಗಳನ್ನು ಗುರುತಿಸಿ ಜಿಲ್ಲಾ ಹಿಂದುಳಿದ ಕಲ್ಯಾಣಾಧಿಕಾರಿಗಳಿಗೆ ವರದಿ ನೀಡಲು ಅವರು ಸೂಚಿಸಿದರು.

ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಸಂಬಂಧ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಂಬಂಧ ಸಮೀಕ್ಷೆ ಕಾರ್ಯ ಮುಗಿಯುವವರೆಗೂ ಪತ್ರಿಕಾ ಪ್ರಕಟಣೆ ನೀಡಲು ಅಧಿಕಾರಿಗಳಿಗೆ ಕ್ರಮ ವಹಿಸುವಂತೆ ಡಿ.ಸಿ. ಅವರು ತಿಳಿಸಿದರು.

ನಿಗಧಿ ಪಡಿಸಿರುವ ಕಾಲಮಿತಿಯೊಳಗೆ ಸಂಬಂಧಿಸಿದ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯ ಸದಸ್ಯರು ಮೇಲ್ಕಂಡ ಅಧಿಕಾರಿಗಳಿಂದ ತಮ್ಮ ವ್ಯಾಪ್ತಿಗೆ ಬರುವ ವಿಭಾಗ ಮಟ್ಟ, ತಾಲ್ಲೂಕು ಮಟ್ಟದ ಮಾಹಿತಿಯನ್ನು ಪಡೆದು ಕ್ರೂಢೀಕರಿಸಿ ಹಾಗೂ ದೃಢೀಕರಿಸಿ ಪ್ರತಿದಿನ ಸದಸ್ಯ ಕಾರ್ಯದರ್ಶಿಗಳಾದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ವರದಿ ನೀಡಲು ಹಾಸನ ಸಕಲೇಶಪುರ ಉಪ ವಿಭಾಗಾಧಿಕಾರಿಗಳು ಸೂಕ್ತ ಕ್ರಮ ವಹಿಸಲು ನಿರ್ದೇಶಿಸಿದರು.

ತಾಲ್ಲೂಕು ಹಂತದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಂಬಂಧ, ಗಣತೀದಾರರಿಗೆ ಮತ್ತು ಮೇಲ್ವಿಚಾರಕರಿಗೆ ಶಾಲಾ ಅವಧಿ ಮುಗಿದ ನಂತರ ಅಥವಾ ಸಾರ್ವಜನಿಕ ರಜೆ ದಿನದಂದು ಟ್ರೈನಿಂಗ್ ಸ್ಥಳವನ್ನು ತಹಶೀಲ್ದಾರ್ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಗುರುತಿಸಿ ಸೆ.12 ರಿಂದ 19 ರೊಳಗೆ ಗಣತೀದಾರರಿಗೆ 2 ಬಾರಿ ತರಬೇತಿಯನ್ನು ನೀಡಲು ಹೇಳಿದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಇ-ಕೆ.ವೈ.ಸಿ. (ಆಧಾರ್) ಕಡ್ಡಾಯವಾಗಿರುತ್ತದೆ. 06 ವರ್ಷದ ಒಳಗಿನ ಮಕ್ಕಳ ಆಧಾರ್ ಕಾರ್ಡ್ ಲಭ್ಯವಿಲ್ಲದಿದ್ದಲ್ಲಿ, ಎನ್ರೋಲ್ ಮೆಂಟ್ ನಂಬರ್ ಮಾಹಿತಿಯನ್ನು ಪಡೆದು ಹಾಗೂ 06 ವರ್ಷದ ನಂತರದ ವಯಸ್ಸಿನ ಕುಟುಂಬದ ಪ್ರತಿ ಸದಸ್ಯರ ಮಾಹಿತಿಯನ್ನು ಆಧಾರ್ ಸಂಖ್ಯೆ ಪಡೆದು ಸಮೀಕ್ಷೆ ಮಾಡಲು ಗಣತೀದಾರರುಗಳಿಗೆ ಅಗತ್ಯ ತಿಳುವಳಿಕೆ ನೀಡಲು ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದು ಡಿ.ಸಿ. ಲತಾಕುಮಾರಿ ಅವರು ತಿಳಿಸಿದರು.

# ನಿವೃತ್ತ ಉಪ ಪ್ರಾಂಶುಪಾಲ ಮುಳ್ಳಯ್ಯಗೆ ಸನ್ಮಾನ

• ಪ್ರಜೋದಯ ವರದಿ

**ಹಳೇಬೀಡು:** ಇಲ್ಲಿಯ ಉಡುಪಿ ಗ್ರ್ಯಾಂಡ್ ಸಭಾಂಗಣದಲ್ಲಿ ಎಐಸಿಸಿ ಸದಸ್ಯ ಗಂಡಸಿ ಶಿವರಾಂ ಅಭಿಮಾನಿ ಬಳಗದಿಂದ ಮಂಗಳವಾರ ನಿವೃತ್ತ ಉಪ ಪ್ರಾಂಶುಪಾಲ ಮುಳ್ಳಯ್ಯ ಅವರನ್ನು ಅಭಿನಂದಿಸಲಾಯಿತು.

ಎಐಸಿಸಿ ಸದಸ್ಯ ಗಂಡಸಿ ಶಿವರಾಂ ಅವರು ಮಾತನಾಡಿ, ಮುಳ್ಳಯ್ಯ 31 ವರ್ಷದ ಶೈಕ್ಷಣಿಕ ಸೇವೆಯಲ್ಲಿ ವಿದ್ಯಾರ್ಥಿ ಸ್ನೇಹಿಯಾಗಿ ಮನ್ನಣೆ ಪಡೆದಿದ್ದಾರೆ. ಶೈಕ್ಷಣಿಕ ಸೇವೆಯಲ್ಲಿ ಶಿಕ್ಷಕ ವೃಂದದ ವಿಶ್ವಾಸ ಗಳಿಸಿ ಉತ್ತಮ ಸೇವೆ ಮಾಡಿದ್ದಾರೆ. ಪೋಷಕರೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದ ಅವರು ರಾಜನಶಿರಿಯೂರು ಹಾಗೂ ಹಳೇಬೀಡಿನ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿ ಸಂಖ್ಯೆ ಹೆಚ್ಚಿಸಿ ಸರ್ಕಾರಿ ಶಾಲೆ ಮುಚ್ಚದಂತೆ ಉಳಿಸಿದ್ದಾರೆ ಎಂದು ಶ್ಲಾಘಿಸಿದರು.

ಪ್ರೌಢಶಾಲೆ ಶಿಕ್ಷಕ, ಮುಖ್ಯ ಶಿಕ್ಷಕ, ಉಪ ಪ್ರಾಂಶುಪಾಲ, ಸಮೂಹ ಸಹಾಯಕ ಶಿಕ್ಷಣಾಧಿಕಾರಿ, ಕ್ಷೇತ್ರ ಸಮನ್ವಯಾಧಿಕಾರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಇಲಾಖೆಯ ಕೆಲಸವನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ. ಅವರನ್ನು ಅಭಿನಂದಿಸುವುದು ನಮ್ಮ ಕರ್ತವ್ಯ ಎಂದರು.




ನಿವೃತ್ತ ಉಪ ಪ್ರಾಂಶುಪಾಲ ಮುಳ್ಳಯ್ಯ ಮಾತನಾಡಿ, ಶೈಕ್ಷಣಿಕ ಸೇವೆಯಲ್ಲಿ ಶಿಕ್ಷಕ ವೃತ್ತಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿ ಕೆಲಸದವರೆಗೆ ಮಾಡಿದ ಸೇವೆಯನ್ನು ಪರಿಗಣಿಸಿ ವಿವಿಧ ಸಂಘ ಸಂಸ್ಥೆಯಿಂದ ಅಭಿನಂದಿಸುತ್ತಿದ್ದಾರೆ. ಶೈಕ್ಷಣಿಕ ಸೇವೆ ದೊರಕಿದ್ದು ಸಾರ್ಥಕ ಎನಿಸುತ್ತಿದೆ. 31 ವರ್ಷದ ಶಿಕ್ಷಣ ಸೇವೆಯಿಂದ ಮನಸ್ಸಿಗೆ ಹಿತ ದೊರಕಿದೆ ಎಂದು ಹೇಳಿದರು.

ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್ ಮಾತನಾಡಿ, ನಿವೃತ್ತಿ ನಂತರವೂ ಸರ್ಕಾರಿ ಸೇವೆ ಮಾಡಿದವರು ಗೌರವ ಉಳಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ, ಮುಳ್ಳಯ್ಯನವರು ಶಿಕ್ಷಣ ಸೇವೆಯಲ್ಲಿ ಅಪಾರ ಅಭಿಮಾನಿಗಳನ್ನು ಗಳಿಸಿದ್ದಾರೆ ಎಂದರು.

ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಎಚ್.ಎನ್.ಶರತ್, ಮುಖಂಡರಾದ ಬಿ.ಎಂ.ಸಂತೋಷ್, ಭೈರೇಶ್, ಚಂದ್ರಶೇಖರ್ ಇದ್ದರು.

# ರೆಡ್ ಕ್ರಾಸ್‌ನಿಂದ ಪ್ರಥಮ ಚಿಕಿತ್ಸೆ ತರಬೇತಿ

• ಪ್ರಜೋದಯ ವರದಿ

**ಹಾಸನ:** ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಹಾಸನ ಶಾಖೆ ವತಿಯಿಂದ ರಾಜೀವ್ ಆಯುರ್ವೇದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ಕಾಲೇಜಿನ 52 ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಒಂದು ದಿನದ ಪ್ರಥಮ ಚಿಕಿತ್ಸೆ ಹಾಗೂ ಸಿ.ಪಿ.ಆರ್ ವಿಧಾನಗಳ ಬಗ್ಗೆ ತರಬೇತಿ ನೀಡಲಾಯಿತು.

ಸೋಮವಾರ ರಾಜೀವ್ ಕಾಲೇಜಿನಲ್ಲಿ ರಾಷ್ಟ್ರೀಯ ಪ್ರಥಮ ಚಿಕಿತ್ಸೆ ಹಾಗೂ ವಿಪತ್ತು ನಿರ್ವಹಣೆ ತರಬೇತುದಾರರು ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಪ್ರಮುಖ ನಿರ್ದೇಶಕರಾದ ಡಾ.ತೇಜಸ್ವಿ, ಕಾಲೇಜಿನ ಪ್ರಾಂಶುಪಾಲ ಡಾ.ನಿತಿನ್ ಎಸ್.ಎ., ಡಾ.ಉದಯಗಣೇಶ್ ಹಾಗೂ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಶಬ್ಬೀರ್ ಅಹ್ಮದ್, ಹೆಚ್.ಡಿ.ಕುಮಾರ್, ಗಿರೀಶ್, ಭೀಮರಾಜ್ ಹಾಗೂ ಅವಿನಾಶ್ ಭಾಗವಹಿಸಿದ್ದರು. ತರಬೇತಿಯ ನಂತರ ತರಬೇತಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಪ್ರಮಾಣ ಪತ್ರಗಳನ್ನು ನೀಡಲಾಯಿತು.



# ನಿರಂತರ ಅಧ್ಯಯನದಿಂದ ಯಶಸ್ಸಿನ ದಾರಿ ಸುಗಮ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳು ಜೀವನದಲ್ಲಿ ನಿರ್ದಿಷ್ಟ ಗುರಿಯೊಂದಿಗೆ ಅಧ್ಯಯನ ಮಾಡಬೇಕು. ಗೆದ್ದೇ ಗೆಲ್ಲುವೆ ಎನ್ನುವ ಆತ್ಮ ವಿಶ್ವಾಸದೊಂದಿಗೆ ಮುನ್ನುಗ್ಗಬೇಕು. ನಾವು ಓದಲು ಬಂದಿದ್ದೇನೆ, ಓದಬೇಕು ಎನ್ನುವ ಪ್ರಜ್ಞೆಯೊಂದಿಗೆ ನಿರಂತರ ಅಧ್ಯಯನ ನಡೆಸಿದಲ್ಲಿ ಯಶಸ್ಸಿನ ದಾರಿ ಸುಗಮವಾಗಲಿದೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಜೆ.ಪಿ.ನಗರದಲ್ಲಿರುವ ಅರ್ವಿ ಕಲ್ಯಾಣ ಮಂಟಪ ಸಭಾಂಗಣದಲ್ಲಿ ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು ವತಿಯಿಂದ ನಡೆದ ಗುರುವಂದನಾ, ಪ್ರತಿಭಾ ಪುರಸ್ಕಾರ ಹಾಗೂ ಸಿಇಟಿ, ನೀಟ್ ತರಗತಿ ಕಾರ್ಯಕ್ರಮ ಉದ್ಘಾಟನೆ ನಡೆಸಿ ಮಾತನಾಡಿದ ಅವರು ಇತ್ತೀಚಿನ ದಿನದಂದು ವಿದ್ಯಾವಂತರೇ ಹೆಚ್ಚು ಅನಾಹುತಗಳು ನಡೆಯುತ್ತಿದೆ ಎಂಬ ಮಾತು ಕೇಳಿ ಬರುತ್ತಿದೆ. ಆ ಕಾರಣದಿಂದ ಶಿಕ್ಷಣದ ಜೊತೆಯಲ್ಲಿ ಸಂಸ್ಕಾರ ವಿದ್ಯಾರ್ಥಿಗಳಿಗೆ ನೀಡಿದರೆ ಮಾತ್ರ ಆತ ಎಂದಿಗೂ ಭ್ರಷ್ಟನಾಗಲು ಸಾಧ್ಯವಿಲ್ಲ ಎಂದು ಆದಿಚುಂಚನಗಿರಿ ಪರಮಪೂಜ್ಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಗಳು ಹೇಳಿದ್ದಾರೆ. ಅವರ ಪ್ರಮಾಣಪತ್ರವೇ ಮುಖ್ಯವಲ್ಲ. ಅದರ ಜೊತೆಗೆ ಸಂಸ್ಕೃತಿ ಮತ್ತು ಸಾಮಾನ್ಯ ಜ್ಞಾನ ಬೆಳೆಸಿಕೊಳ್ಳಬೇಕು ಎಂದರು.



ರಾಜ್ಯದ ವಿವಿಧೆಡೆ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜುಗಳನ್ನು ಸ್ಥಾಪನೆಯ ಮಾಡಿದ ಹೆಗ್ಗಳಿಕೆ ನಮ್ಮ ಹಿರಿಯ ಗುರುಗಳಿಗೆ ಸೇರುತ್ತದೆ ಎಂದ ಅವರು, ನಮ್ಮ ಶಿಕ್ಷಣ ಸಂಸ್ಥೆಗಳಿಗೆ ಬರುವಂತ ಬಹುತೇಕ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಹಿನ್ನೆಲೆಯನ್ನು ಹೊಂದಿರುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪೋಷಕರ ಭರವಸೆಗಳನ್ನು ಎಂದಿಗೂ ಹುಸಿ ಮಾಡಬೇಡಿ, ಪುಸ್ತಕಕ್ಕೆ ವಿದ್ಯಾರ್ಥಿಗಳ ಭವಿಷ್ಯವನ್ನೇ ಬದಲಾಯಿಸುವ ಏಕೈಕ ಶಕ್ತಿ ಇದೆ. ಆದ್ದರಿಂದ ಗ್ರಂಥಾಲಯದ ಸದ್ಬಳಿಕೆಗಳನ್ನು ವಿದ್ಯಾರ್ಥಿಗಳು ಮಾಡಿಕೊಳ್ಳಬೇಕು, ಇತ್ತೀಚಿನ ಸ್ಪರ್ಧಾತ್ಮಕ ಯುಗದಲ್ಲಿ ಗ್ರಂಥಾಲಯಗಳ ಪ್ರಾಮುಖ್ಯತೆ ಇರುವ ನಿಟ್ಟಿನಲ್ಲಿ ಶಿಕ್ಷಕರು ಈ ಬಗ್ಗೆ ಗಮನ ನೀಡಬೇಕು, ಬೇಲೂರು ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಪ್ರತಿವರ್ಷ ಶೇಕಡ 100ರಷ್ಟು ಫಲಿತಾಂಶವನ್ನು ಪಡೆಯುವ ಮೂಲಕ ಮಠಕ್ಕೆ ಕೀರ್ತಿ ತಂದಿದ್ದಾರೆ ಮುಂದಿನ ದಿನಗಳಲ್ಲಿ ಇನ್ನೂ ಕೂಡ ಎಚ್ಚರ ಕೆಲಸವನ್ನು ಮಾಡಲಿ ಎಂದು ತಿಳಿಸಿದರು.

ಚಿಕ್ಕಮಗಳೂರು ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಸಿ.ಟಿ.ಜಯದೇವ್, ಮೊಸಳೆ ಹೊಸಹಳ್ಳಿ ಕಾಲೇಜಿನ ಪ್ರಾಧ್ಯಾಪಕ ಶೇಖರ್ ಹೊಡೆನೂರು, ಕಾಲೇಜು ಪ್ರಾಂಶುಪಾಲ ಎಂ.ಸಿ.ದಿವ್ಯಕುಮಾರ್, ಸಹ ಪ್ರಾಧ್ಯಾಪಕರು ಹಾಜರಿದ್ದರು.

# ಶಾಲೆಗೆ ಪೀಠೋಪಕರಣ ಕೊಡುಗೆ





**ಹಾಸನ: ತಾಲ್ಲೂಕಿನ ಕೆಂಚಟ್ಟಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ರೋಟರಿ ಸಂಸ್ಥೆಯಿಂದ ಮಕ್ಕಳಿಗೆ ನಲಿ-ಕಲಿ ಟೇಬಲ್, ಕುರ್ಚಿಗಳನ್ನು ಕೊಡುಗೆಯಾಗಿ ನೀಡಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕೆ. ರಂಗನಾಥ, ರೋಟರಿ ಅಧ್ಯಕ್ಷ ಮಹೇಶ್, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಹೇಮಲತಾ, ತಾಲ್ಲೂಕು ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಡಿ. ರಮೇಶ್, ರೋಟರಿ ಪದಾಧಿಕಾರಿಗಳು ಹಾಗು ಗ್ರಾಮಸ್ಥರು ಹಾಜರಿದ್ದರು.**

# ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿದರೆ ಸವಿತಾ ಸಮಾಜದ ಅಭಿವೃದ್ಧಿ

• ಪ್ರಜೋದಯ ವರದಿ

**ಸಕಲೇಶಪುರ:** ಸವಿತಾ ಸಮಾಜದವರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಲು ಮುಂದಾದಲ್ಲಿ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಸವಿತಾ ಸಭಾಂಗಣದಲ್ಲಿ ಸವಿತಾ ಸಮಾಜದ ವತಿಯಿಂದ ಆಯೋಜಿಸಲಾಗಿದ್ದ 16ನೇ ವರ್ಷದ ವಾರ್ಷಿಕ ಮಹಾಸಭೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸವಿತಾ ಸಮಾಜದವರು ಸಣ್ಣ ಸಮಾಜ ಎಂದು ಆತಂಕ ಪಡುವ ಅಗತ್ಯವಿಲ್ಲ. ಸಮಾಜಕ್ಕೆ ತನ್ನದೇ ಆದ ಶಕ್ತಿ ಇದೆ. ನಾನು ಶಾಸಕನಾಗಲು ಸವಿತಾ ಸಮಾಜದ ಪಾತ್ರ ಮಹತ್ವದ್ದಾಗಿದೆ. ಇಂದು ಹೊರ ರಾಜ್ಯದವರು ಇಲ್ಲಿಗೆ ಬಂದು ಸವಿತಾ ಸಮಾಜದ ವೃತ್ತಿಯನ್ನು ಮಾಡುತ್ತಿದ್ದಾರೆ. ಆದರೆ, ಈ ಹಿಂದಿನಂತೆ ಮಂಗಳವಾರ ರಜೆ ಮಾಡದೆ ಕಾರ್ಯ ನಿರ್ವಹಿಸುತ್ತಿರುವುದು ಸರಿಯಲ್ಲ. ಇವರು ಸಹ ಸಮಾಜದ ನಿಯಮಗಳನ್ನು ಪಾಲಿಸಬೇಕು. ಸವಿತಾ ಸಮಾಜದ ಬಂಧುಗಳು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರನ್ನು ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳನ್ನಾಗಿ ಮಾಡಬೇಕು. ಆಗ ಮಾತ್ರ ಸಮಾಜದ ಏಳಿಗೆ ಸಾಧ್ಯ. ಇತ್ತೀಚೆಗೆ ನಮ್ಮ ಪುಣ್ಯ ಕ್ಷೇತ್ರ ಧರ್ಮಸ್ಥಳದ ಹೆಸರನ್ನು ಹಾಳು ಮಾಡಲು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಯಾರೂ ಸಹ ಅಪಪ್ರಚಾರಕ್ಕೆ ಕಿವಿಕೊಡಬಾರದು. ಸವಿತಾ ಸಮಾಜಕ್ಕೆ ನಾನು ಸದಾ ಬೆಂಬಲವಾಗಿರುತ್ತೇನೆ ಎಂದರು.



ಪುತ್ತೂರಿನ ವಿಧಾನ ಪರಿಷತ್ ಸದಸ್ಯ ಕಿಶೋರ್ ಮಾತನಾಡಿ, ಅತ್ಯಂತ ಸಣ್ಣ ಸಮಾಜಕ್ಕೂ ರಾಜಕೀಯ ಪ್ರಾಶಸ್ತ್ಯ ನೀಡುವ ಪಕ್ಷವಿದ್ದರೆ ಅದು ಬಿಜೆಪಿ ಮಾತ್ರ. ಬಿಜೆಪಿ ಪಕ್ಷವು ಸವಿತಾ ಸಮಾಜಕ್ಕೂ ಪ್ರಾಶಸ್ತ್ಯ ನೀಡಿರುವುದರಿಂದ ನಾನು ವಿಧಾನ ಪರಿಷತ್ ಸದಸ್ಯನಾಗಿದ್ದೇನೆ. ಸವಿತಾ ಸಮಾಜದ ಎಲ್ಲರೂ ಒಗ್ಗಟ್ಟಾಗಬೇಕು. ನಾನು ಹಾಗೂ ಶಾಸಕರು ಸ್ವಂತಕ್ಕಿಂತ ಸಮಾಜಕ್ಕೇ ಸರ್ವಸ್ವ ಎನ್ನುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಭಾರತಕ್ಕೆ ವಿಶ್ವದ ಮಟ್ಟದಲ್ಲಿ ಕೀರ್ತಿ ಬಂದಿದೆ ಎಂದರು.

ಪುರಸಭಾ ಅಧ್ಯಕ್ಷೆ ಜ್ಯೋತಿ ರಾಜ್ ಕುಮಾರ್, ಪುರಸಭಾ ಸದಸ್ಯೆಯರಾದ ರೇಖಾ ರುದ್ರಕುಮಾರ್, ಅನ್ನಪೂರ್ಣ, ಸಾಮಾಜಿಕ ಹೋರಾಟಗಾರ ಯಡೇಹಳ್ಳಿ ಮಂಜುನಾಥ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ರವಿ ಕುಮಾರ್, ಇತರರು ಹಾಜರಿದ್ದರು.




**ಹೆತ್ತೂರು: ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ವಿಭಾಗದ ದೈಹಿಕ ಶಿಕ್ಷಕ ಹೆಚ್.ಪಿ.ರಮೇಶ್‌ಗೆ ಶಾಲೆಯ ವತಿಯಿಂದ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು.**

**ಕಳೆದ 33 ವರ್ಷಗಳಿಂದ ಹೊಂಗಡಹಳ್ಳ, ವನಗೂರು, ಶುಕ್ರವಾರಸಂತೆ ಮತ್ತು ಹೆತ್ತೂರು ಶಾಲೆಗಳಲ್ಲಿ ಸೇವೆ ಸಲ್ಲಿಸಿದ್ದರು. ವಿದ್ಯಾರ್ಥಿ ದಿಸೆಯಲ್ಲಿ ವಿಶ್ವವಿದ್ಯಾಲಯ ಮಟ್ಟದ ಕ್ರೀಡಾಪಟು ಆಗಿದ್ದ ಅವರು ಸಕಲೇಶಪುರ ತಾಲ್ಲೂಕಿನಲ್ಲಿ ನಡೆದ ಹಲವು ಕ್ರೀಡಾಕೂಟಗಳ ಸಂಯೋಜಕರಾಗಿದ್ದು, ಹಲವು ವಿದ್ಯಾರ್ಥಿಗಳನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟಕ್ಕೆ ಆಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಶಾಲಾಭಿವೃದ್ಧಿ ಸಮಿತಿಯ ಉಪಾಧ್ಯಕ್ಷೆ ಸುಮ, ಪ್ರಾಂಶುಪಾಲ ಬಿ.ಸಿ.ಮಂಜುನಾಥ, ಉಪ ಪ್ರಾಂಶುಪಾಲ ಬಿ.ಭಾಸ್ಕರ, ಮುಖ್ಯೋಪಾಧ್ಯಾಯ ಹೆಚ್.ಕೆ.ಸತೀಶ್, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.**

## 3 ಸಾವಿರ ಲೈನ್‌ಮನ್‌ಗಳ ನೇಮಕ ಶೀಘ್ರ

**ಧಾರವಾಡ:** ಮೂರು ಸಾವಿರ ಲೈನ್‌ಮನ್ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲಿ ಪೂರ್ಣಗೊಳ್ಳಲಿದೆಯೆಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದ್ದಾರೆ.

ಸುದ್ದಿಗೋಷ್ಟಿಯಲ್ಲಿ ಮಂಗಳವಾರ ಮಾತನಾಡಿ, ಎಲ್ಲಾ ವಿದ್ಯುತ್ ಕಂಪನಿಗಳಿಗೂ (ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ, ಸೆಸ್ಕ್) ಲೈನ್‌ಮನ್‌ಗಳನ್ನು ಒದಗಿಸಲಾಗುವುದು. ನೇಮಕವಾದವರು 10 ವರ್ಷ ಒಂದೇ ಕಂಪನಿ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಬೇಕೆಂಬ ನಿಯಮ ರೂಪಿಸಲಾಗಿದೆ ಎಂದರು.



**ಹಾಸನ: ಜಿಲ್ಲಾ ಕ್ರೀಡಾಂಗಣದಲ್ಲಿ ಸೆ.8 ರಂದು ನಡೆದ ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟದಲ್ಲಿ ಹಾಕಿ ಹಾಸನ ಸಂಸ್ಥೆ ಪ್ರಥಮ ಸ್ಥಾನ ಗಳಿಸಿ ವಿಭಾಗಿಯ ದಸರಾ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುತ್ತದೆ.**

## ಈದ್ ಮೆರವಣಿಗೆಯಲ್ಲಿ ಪಾಕ್ ಪರ ಘೋಷಣೆ

**ಶಿವಮೊಗ್ಗ:** ಭದ್ರಾವತಿಯಲ್ಲಿ ನಡೆದ ಈದ್ ಮಿಲಾದ್ ಮೆರವಣಿಗೆ ವೇಳೆ ಪಾಕಿಸ್ತಾನ ಪರ ಘೋಷಣೆ ಕೂಗುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಭದ್ರಾವತಿಯ ಅಂಬೇಡ್ಕರ್ ವೃತ್ತದಲ್ಲಿ ಮೆರವಣಿಗೆ ಸಾಗುವಾಗ ಕೆಲವು ಯುವಕರಿಂದ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೇಳಿಬಂದಿದೆ. ವಿಡಿಯೊ ಸಂಬಂಧ ಭದ್ರಾವತಿಯ ಓಲ್ಡ್ ಟೌನ್ ಪೊಲೀಸ್ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಡಿಯೊದ ಸತ್ಯಾಸತ್ಯತೆ ಪರಿಶೀಲಿಸಲಾಗುತ್ತಿದೆ. ಅದು ಎಲ್ಲಿ ಹಾಗೂ ಯಾವಾಗ ಚಿತ್ರೀಕರಣಗೊಂಡಿದೆ. ನೈಜತೆ ದೃಢಪಟ್ಟರೆ ಘೋಷಣೆ ಕೂಗಿದವರು ಯಾರೆಂಬುದರ ಬಗ್ಗೆಯೂ ತನಿಖೆ ನಡೆಸಿದ್ದೇವೆಂದು ಎಸ್ಪಿ ಜಿ.ಕೆ. ಮಿಥುನ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

# ಚುಟುಕು ಸಾಹಿತ್ಯ ಎಲ್ಲ ಸ್ಥರದವರಿಗೂ ಒಪ್ಪಿತವಾದುದು

• ಪ್ರಜೋದಯ ವರದಿ

**ಹಾಸನ:** ಚುಟುಕು ಸಾಹಿತ್ಯ ಸರ್ವರಿಗೂ ಅಪೇಕ್ಷಿತ ಸಾಹಿತ್ಯ. ಎಲ್ಲ ಸ್ಥರದವರಿಗೂ ಒಪ್ಪಿತವಾದುದಾಗಿದೆ ಎಂದು ಕೇಂದ್ರ ಚುಟುಕು ಸಾಹಿತ್ಯ ಪರಿಷತ್ತಿನ ಸಂಸ್ಥಾಪಕಾಧ್ಯಕ್ಷ ಡಾ ಎಂ.ಜಿ.ಆರ್. ಅರಸು ತಿಳಿಸಿದರು.

ನಗರದ ಆಚಾರ್ಯ ಕಾಮರ್ಸ್ ಕಾಲೇಜಿನ ಸಭಾಂಗಣದಲ್ಲಿ ನಡೆದ ಚುಟುಕು ಕವಿಗೋಷ್ಠಿ, ಹಳೆ ಬೇರು ಹೊಸ ಚಿಗುರು ಕಾರ್ಯಕ್ರಮ, ಹಾಗೂ ದತ್ತಿನಿಧಿ ರಾಜ್ಯ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡಿ, ಚುಟುಕು ಸಾಹಿತ್ಯ ಪರಿಷತ್ತು ಇಂದು ತಾಲ್ಲೂಕು, ಜಿಲ್ಲೆ, ರಾಜ್ಯ ಹಾಗೂ ಅಂತರ ರಾಜ್ಯದವರೆಗೂ ಸ್ಥಾಪನೆಗೊಂಡಿದೆ. ನಾಡಿನೆಲ್ಲೆಡೆ ಸಮ್ಮೇಳನ ನಡೆಯುತ್ತಿದೆ. ಸಾವಿರಾರು ಚುಟುಕು ಕವಿಗಳನ್ನು ಹುಟ್ಟುಹಾಕುವ ಕೆಲಸ ಮಾಡುತ್ತಿದ್ದೇವೆ ಎಂದರು.




ಪ್ರಾಂಶುಪಾಲ ಡಾ ಆದರ್ಶ ಮಾತನಾಡಿ, ನಮ್ಮ ಕಾಲೇಜು ಶಿಕ್ಷಣ ನೀಡುವುದರ ಜೊತೆಗೆ ಉತ್ತಮ ಸಂಸ್ಕೃತಿ, ಸಾಹಿತ್ಯ, ಕ್ರೀಡೆ, ಲಲಿತಕಲೆಗೆ ಪ್ರಾಮುಖ್ಯತೆ ಕೊಡುತ್ತಿದ್ದೇವೆ. ಒಬ್ಬ ವಿದ್ಯಾರ್ಥಿ ಕೇವಲ ಪುಸ್ತಕ ಕಲಿತರಷ್ಟೇ ಸಾಲದು. ಸುಸಂಸ್ಕೃತ ಭವಿತವ್ಯದ ಸತ್ಪ್ರಜೆಯಗಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥ್ ಮಾತನಾಡಿ, ಸಾಹಿತ್ಯ ಸರ್ವರನ್ನೂ ಉಲ್ಲಸಿತರನ್ನಾಗಿರಿಸುವ ಕ್ಷೇತ್ರ. ಅದರಲ್ಲೂ ಚುಟುಕು ಸಾಹಿತ್ಯ ಬಹಳ ಬೇಗ ಜನರನ್ನು ಆಕರ್ಷಿತರನ್ನಾಗಿಸುತ್ತದೆ. ಇಂತಹ ಪರಿಷತ್ ಮೂಲಕ ರಾಜ್ಯ ಪ್ರಶಸ್ತಿ ಪಡೆಯುತ್ತಿರುವುದು ನನಗೆ ಹೆಮ್ಮೆಯ ವಿಚಾರ ಎಂದರು.

ಪತ್ರಕರ್ತ ಪ್ರಕಾಶ್ ಜಿ. ಮಾತನಾಡಿ, ನಾನು ಪತ್ರಕರ್ತನಾಗಿ ಹಲವು ಸ್ಥರಗಳಲ್ಲಿ ಕೆಲಸ ಮಾಡಿದ್ದೇನೆ. ಹಾಗೆಯೇ ನನ್ನ ಸ್ವರಚಿತ ಚೊಚ್ಚಲ ಕಾದಂಬರಿ ನನ್ನಿರಿ ಬರೆದು ಪ್ರಕಟಿಸಲು ಸುಮಾರು ಎರಡು ವರ್ಷಗಳೇ ಬೇಕಾದವು. ಇದರಿಂದ ನನಗೆ ಅರ್ಥವಾಗಿದ್ದು ಒಳ್ಳೆಯ ಸಾಹಿತ್ಯದ ರಚನೆ ಗಜಪ್ರಸವದಷ್ಟೇ ಕಷ್ಟದಾಯಕ. ಹಾಗಾಗಿ ಒಬ್ಬ ಕವಿ ಒಂದು ಕವನ ಬರೆದು ಪ್ರಕಟಿಸುವುದಕ್ಕೆ ಮುಂಚೆ ಹತ್ತಾರು ಬಾರಿ ವಿಮರ್ಶೆಗೆ ಒಳಪಡಿಸಬೇಕು ಎಂದರು.

ಜಿಲ್ಲಾ ಚುಸಾಪ ಅಧ್ಯಕ್ಷ ಬಾ.ನಂ. ಲೋಕೇಶ್, ಪ್ರಾಧ್ಯಾಪಕಿ ಸೌಮ್ಯಶ್ರೀ ಆಚಾರ್ಯ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷೆ ಶ್ವೇತ ಹರೀಶ್, ಬೆಸ್ಟ್ ಕಾಲೇಜಿನ ಸ್ಥಾಪಕ ಈಶ್ವರ್, ಅಧ್ಯಯನ ಕಾಲೇಜಿನ ಕಾರ್ಯದರ್ಶಿ ಡಾ. ಚೇತನ್ ಕುಮಾರ್, ಪ್ರಾಂಶುಪಾಲ ಚಂದ್ರಶೇಖರ, ಕೊಟ್ರೇಶ್, ಮಳಲಿ ಹರೀಶ್ ಕುಮಾರ್ ಇತರರಿದ್ದರು.

**Change of name**

Khutieje Begum Reshma W/o Abid saleem aged 52 year's residing at # 1002. 7th cross near mosque K. R. Puram. Hassan 573201 I have changed my name due to marital status from Reshma to khutieja Begum Reshma above mentioned both names pertain to one and the same person vide affidavit Dated 08/09/2025 sworn before noatry D. S. Jagadhamba Hassan

## ಸೆ.11 ರಂದು ವಿದ್ಯುತ್ ವ್ಯತ್ಯಯ

**ಹೊಳೆನರಸೀಪುರ:** ನೋಡಲ್ ಕೇಂದ್ರ ವ್ಯಾಪ್ತಿಯ 66/11 ಕೆ.ವಿ.ವಿ.ವಿ.ಕೇಂದ್ರ ಮಳಲಿ. ಇಲ್ಲಿ ಸೆ.11 ರಂದು ಎರಡನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ, ಮಳಲಿ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಮಳಲಿ, ದುಮ್ಮಗೆರೆ, ತೆರಣ್ಯ, ಮಾವನೂರು, ಲಕ್ಷ್ಮೀಪುರ, ಜಾಗರಹಳ್ಳಿ, ದೇವಿಹಳ್ಳಿ, ಸಂತೆಕೊಪ್ಪಲು, ನಾಗನಹಳ್ಳಿ, ಮರ್ಕುಲಿ, ಸುತ್ತಮುತ್ತಲಿನ ಗ್ರಾಮಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಐಸಿಸ್ ನಂಟು: ದೇಶಾದ್ಯಂತ 21 ಕಡೆ ಎನ್‌ಐಎ ಶೋಧ

**ನವದೆಹಲಿ:** ಐಸಿಸ್ ಹಾಗು ಇತರ ಸಂಘಟನೆಗಳೊಂದಿಗೆ ನಂಟು ಹೊಂದಿರುವ ಭಯೋತ್ಪಾದಕ ಪಿತೂರಿ ಸಂಬಂಧ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಕರ್ನಾಟಕ ಸೇರಿ ಐದು ರಾಜ್ಯಗಳು ಹಾಗು ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ 21 ಕಡೆಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ ಹಾಗು ತಮಿಳುನಾಡು ಮುಂತಾದ ರಾಜ್ಯಗಳಲ್ಲಿ, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ ಸೋಮವಾರ ಶೋಧ ನಡೆಸಲಾಗಿದೆಯೆಂದು ಹೇಳಿದ್ದಾರೆ. ಈ ವರ್ಷ ಜೂನ್‌ನಲ್ಲಿ ತಮಿಳುನಾಡು ಚೆಂಗಲ್‌ಪೆಟ್ಟು ಜಿಲ್ಲೆಯ ಕಾಯರ್ ಪೊಲೀಸ್ ಠಾಣೆಯಲ್ಲಿ ದಾಖಲಾದ ದೂರನ್ನು ಎನ್‌ಐಎ ವಹಿಸಿಕೊಂಡಿತ್ತು.

ಸೋಮವಾರದ ಶೋಧ ಕಾರ್ಯಾಚರಣೆಯಲ್ಲಿ ಮೊಬೈಲ್ ಹಾಗು ಅಪರಾಧ ಸಾಕ್ಷ್ಯ ಚಿತ್ರ ಸಾಮಾಗ್ರಿ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ಹೇಳಲಾಗಿದೆ.

**ಪ್ರತಿಯೊಬ್ಬರೂ ಕೈ ಜೋಡಿಸಿದರೆ ಕಾರ್ನಿಯ ಅಂಧತ್ವ ನಿವಾರಣೆ ಸಾಧ್ಯ: ಡಾ|| ಕವಿತಾ**

# ನೇತ್ರದಾನದ ಕುರಿತು ಅರಿವು ಮೂಡಿಸುವುದು ಅಗತ್ಯ

• ಪ್ರಜೋದಯ ವರದಿ

**ಹಾಸನ:** ನೇತ್ರದಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಮುಖ್ಯ. ಕಾರ್ನಿಯ ಕುರುಡುತನವನ್ನು ನಿವಾರಿಸಲು ಎಲ್ಲರೂ ಕೈ ಜೋಡಿಸಿದರೆ ಸಾಧ್ಯವಾಗುತ್ತದೆ ಎಂದು ಹಿಮ್ಸ್‌ನ ನೇತ್ರ ವಿಭಾಗದ ಮುಖ್ಯಸ್ಥರಾದ ಡಾ.ಕವಿತಾ ಅವರು ತಿಳಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಸನ ಜಿಲ್ಲಾ ಅಂಧತ್ವ ನಿಯಂತ್ರಣಾ ವಿಭಾಗ ಹಾಸನ, ನೇತ್ರ ವಿಭಾಗ ಹಿಮ್ಸ್ ಹಾಸನ, ಲಯನ್ಸ್ ಕ್ಲಬ್ ಹಾಸನ ಯಗಚಿ ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪಂಚಾಯತ್ ಹೊಯ್ಸಳ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 40ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಕಾರ್ಯಕ್ರಮದ ಸಮರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಕಾರ್ನಿಯ ಸಂಗ್ರಹಿಸಿ ಐ ಬ್ಯಾಂಕ್ ಹಿಮ್ಸ್ ಹಾಸನ ಇಲ್ಲಿಗೆ ಕಳುಹಿಸಿ ಕೊಡಬೇಕೆಂದು ತಿಳಿಸಿದರಲ್ಲದೆ ಐ ಬ್ಯಾಂಕ್ ಹಿಮ್ಸ್ ಹಾಸನ ಇಲ್ಲಿನ ದೂರವಾಣಿ ಸಂಖ್ಯೆ 9900860044 ಯನ್ನು ನೀಡಿ ಸಂಪರ್ಕಿಸುವಂತೆ ಕೋರಿದರು.



ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಬಾಬು ಅವರು ಮಾತನಾಡಿ, ನೇತ್ರದಾನವು ಮಹಾದಾನವಾಗಿದ್ದು, ಒಬ್ಬ ವ್ಯಕ್ತಿಯು ದಾನ ಮಾಡಿದ ನೇತ್ರಗಳು ಇಬ್ಬರು ಕಾರ್ನಿಯಾ ಅಂಧರಿಗೆ ಬೆಳಕನ್ನು ನೀಡುತ್ತವೆ. ಆದ್ದರಿಂದ ನೇತ್ರದಾನ ಅತ್ಯುತ್ತಮ ಮಾನವೀಯ ಸೇವೆಯಾಗಿದೆ. ವಯಸ್ಸು, ಲಿಂಗ, ಜಾತಿ, ರಕ್ತದ ಗುಂಪು ಯಾವುದೇ ಭೇದ ಭಾವವಿಲ್ಲದೆ ಎಲ್ಲರೂ ನೇತ್ರದಾನ ಮಾಡಬಹುದು. ವೈದ್ಯ ವೃತ್ತಿ ಮಹತ್ವದ್ದು, ಆರೋಗ್ಯ ಇಲಾಖೆಯಲ್ಲಿರುವಂತಹ ಸರ್ಕಾರಿ ಸೌಲಭ್ಯಗಳನ್ನು ಜನ ಸಾಮಾನ್ಯರಿಗೆ ಅನುಕೂಲವಾಗುವ ರೀತಿಯಲ್ಲಿ ಪರಿಚಯಿಸತಕ್ಕದ್ದು ನಮ್ಮ -ನಿಮ್ಮೆಲ್ಲರ ಕರ್ತವ್ಯವೆಂದು ತಿಳಿಸಿದರು.

ಜಿಲ್ಲಾ ಅಂಧತ್ವ ನಿವಾರಣಾ ಅಧಿಕಾರಿ ಡಾ||ನಾಗೇಶ್.ಪಿ ಆರಾಧ್ಯ ಅವರು ಮಾತನಾಡಿ, ಜಿಲ್ಲೆಯಲ್ಲಿ ಪ್ರಸ್ತುತ ಕಣ್ಣು ಗುಡ್ಡೆಗಳ ಸಂಗ್ರಹಣೆಯನ್ನು ಹಿಮ್ಸ್ ನೇತ್ರ ವಿಭಾಗದಿಂದ ಮಾತ್ರ ಮಾಡಲಾಗುತ್ತಿದ್ದು, ಈ ಕಾರ್ಯವನ್ನು ಎಲ್ಲಾ ತಾಲ್ಲೂಕು ಆಸ್ಪತ್ರೆಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ವ್ಯಾಪ್ತಿಗೆ ವಿಸ್ತರಿಸುವ ಕಾರ್ಯ ಯೋಜನೆಯನ್ನು ಸಿದ್ದಪಡಿಸುತ್ತಿರುವುದಾಗಿ ತಿಳಿಸಿದರು.

ಕಳೆದ ವರ್ಷದಿಂದಲೇ ಜಿಲ್ಲೆಯಲ್ಲಿ 23 ಆಶಾಕಿರಣ ಕೇಂದ್ರಗಳನ್ನು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದ್ದು, ಮಾನವ ಸಂಪನ್ಮೂಲದ ಕೊರತೆಯಿಂದಾಗಿ ಕೆಲವು ಆಶಾಕಿರಣ ಕೇಂದ್ರಗಳು ಸಂಪೂರ್ಣವಾಗಿ, ಕ್ರಿಯಾತ್ಮಕವಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಮತ್ತು 29 ಮಂಜೂರಾದ ನೇತ್ರಾಧಿಕಾರಿಗಳ ಹುದ್ದೆಗಳಲ್ಲಿ ಕೇವಲ ಎಂಟು (8) ಹುದ್ದೆಗಳು ಮಾತ್ರ ಜಿಲ್ಲೆಯ ನೇತ್ರಾಧಿಕಾರಿಗಳು ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದು, 2024-25ರ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಅಂಧತ್ವ ನಿವಾರಣಾ ಕಾರ್ಯಕ್ರಮದಲ್ಲಿ 90 ರಷ್ಟು ಸಾಧನೆಯಾಗಿದ್ದು ಅದಕ್ಕೆ ಸಹಕಾರಿಯಾದ ಎಲ್ಲರ ಕೊಡುಗೆಯನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಮಂಜುಳಾ, ಲಯನ್ಸ್ ಕ್ಲಬ್ ಯಗಚಿ ಸಂಸ್ಥೆಯ ಕಾರ್ಯದರ್ಶಿ ಲಯನ್ ಲೋಹಿತ್ ಕುಮಾರ್, ಸ್ವಯಂ ಸೇವಾ ಸಂಸ್ಥೆಯವರು ಮತ್ತು ಅಂಧತ್ವ ನಿಯಂತ್ರಣ ವಿಭಾಗದ ಸಿಬ್ಬಂದಿ ವರ್ಗದವರು ಹಾಜರಿದ್ದರು.

**: : ಪ್ರಮಾಣ ಪತ್ರ : :**

ಸಕಲೇಶಪುರ ಟೌನ್, ಚಂಪಕನಗರ, 5ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ರೋಟರಿ ಸ್ಕೂಲ್ ಡೌನ್ ಹತ್ತಿರದಲ್ಲಿ ವಾಸವಾಗಿರುವ ವೆಂಕಟೇಶರವರ ಪತ್ನಿಯಾದ ಸುಮಾರು 35 ವರ್ಷ ವಯಸ್ಸಿನ ವೈ.ಎಸ್.ವಸಂತ ಆದ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ:-

ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನಾನು ದಿನಾಂಕ: 07/09/2025 ರಂದು ಹಾಸನದಲ್ಲಿರುವ ನನ್ನ ತಮ್ಮನ ಮನೆಗೆ ಬಂದಿದ್ದು, ನಾನು ನನ್ನ ಜೊತೆಯಲ್ಲಿ ತಂದಿದ್ದ ನನ್ನ ಬ್ಯಾಗ್‌ನಲ್ಲಿ ನನಗೆ ಸಂಬಂಧಿಸಿದ ಆಧಾರ್ ಕಾರ್ಡ್, ಪಾನ್ ಕಾರ್ಡ್ ಹಾಗೂ ನಾನು ಸಹಿ ಮಾಡಿರುವ ಎಸ್.ಬಿ.ಐ. ಸಕಲೇಶಪುರ ಶಾಖೆಯ ಖಾತಾ ನಂ. 39794671421 ರ ಚೆಕ್ ಬುಕ್ ನಂ. 400001 ರಿಂದ 400025 ಹಾಗೂ 279111 ರಿಂದ 279130 ರ ವರೆಗಿನ ಚೆಕ್‌ಗಳು ಹಾಗೂ ಎಕ್ಸಿಸ್ ಬ್ಯಾಂಕ್, ಹೆಬ್ಬಾಸಲೆ, ಸಕಲೇಶಪುರ ಶಾಖೆಯ ಖಾತಾ ನಂ. 92301002774384 ರ ಚೆಕ್ ಬುಕ್ ನಂ. 037141 ರಿಂದ 037150 ಹಾಗೂ ಕೆನರಾ ಬ್ಯಾಂಕ್, ಸಕಲೇಶಪುರ ಶಾಖೆಯ ಖಾತಾ ನಂ. 064101031717 ರ ಚೆಕ್ ಬುಕ್ ನಂ. 188451 ರಿಂದ 188475 ರ ಚೆಕ್‌ಗಳು ಹಾಸನ ಹಳೆ ಬಸ್ ನಿಲ್ದಾಣದಲ್ಲಿ ಕಳೆದು ಹೋಗಿರುತ್ತದೆ. ಈ ಸಂಬಂಧವಾಗಿ ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಕೆಳಕಂಡನ ನಂಬರ್‌ಗೆ ತಿಳಿಸತಕ್ಕದ್ದಾಗಿ ಕೋರಿರುತ್ತದೆ. ಮೊ: 8197579792, 938049005.

ನಾನು ಮೇಲೆ ನೀಡಿರುವ ಮಾಹಿತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಹಾಸನ
ದಿನಾಂಕ: 09/09/2025

ವಸಂತ ವೈ.ಎಸ್.
ಪ್ರಮಾಣದಾರರು
(ವೈ.ಎಸ್.ವಸಂತ)

## ಶೀಟ್ ಅಳವಡಿಕೆ ಕಾಮಗಾರಿ ಸ್ಥಗಿತಕ್ಕೆ ಸೂಚನೆ

» ಮೊದಲನೇ ಪುಟದಿಂದ

ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತದೆ. ಲಾರಿಗಳು ತಿರುವು ಪಡೆದು ಕೊಳ್ಳಲು ಸಮಸ್ಯೆ ಎದುರಾಗುತ್ತದೆ. ಶಾಲಾ ವಾಹನಗಳು, ಬಸ್‌ಗಳ ಸಂಚಾರಕ್ಕೂ ಸಮಸ್ಯೆ ಉಂಟಾಗುತ್ತದೆ ಎಂದು ಶಾಸಕರ ಗಮನಕ್ಕೆ ತಂದರು.

ಜನರ ಅಹವಾಲು ಸ್ವೀಕರಿಸಿ ಬಳಿಕ ಶಾಸಕ ಹೆಚ್.ಪಿ.ಸ್ವರೂಪ್ ಅವರು ಅಧಿ ಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ದರು. ಈ ಕಾಮಗಾರಿಯಿಂದ ಸ್ಥಳೀ ಯರಿಗೆ ಹೆಚ್ಚಿನ ಸಮಸ್ಯೆ ಎದುರಿಸಬೇಕಾಗುತ್ತದೆ. ಇಲ್ಲಿನ ನಿವಾಸಿಗಳಿಗೆ ಓಡಾಡಲು ಇರುವುದು ಇದೊಂದೆ ರಸ್ತೆ. ಮುಖ್ಯರಸ್ತೆಯಲ್ಲಿ ಹೆಚ್ಚಿನ ವಾಹನಗಳು ಸಂಚಾರ ಮಾಡುವುದಿಂದ ಕಷ್ಟವಾಗುತ್ತದೆ. ನಗರ ಪ್ರದೇಶಕ್ಕೆ ಬರಲು ಈಗಿರುವ ಮಾರ್ಗವೇ ಸುಲಭವಾಗಿದೆ. ಆದ್ದರಿಂದ ತಕ್ಷಣ ಕಾಮಗಾರಿ ನಿಲ್ಲಿಸಿ ಸ್ಥಳೀಯರಿಗೆ ನೆರವಾಗಬೇಕೆಂದು ಸೂಚನೆ ನೀಡಿದ ಅವರು, ಈ ಬಗ್ಗೆ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರ ಬಳಿ ನಿಯೋಗ ತೆರಳಿ ಮನವಿ ಸಲ್ಲಿಸಲಾಗುವುದು. ಅಲ್ಲಿ ಯವರೆಗೆ ಯಾವುದೇ ಕಾಮಗಾರಿ ಮಾಡ ಕೂಡದು ಎಂದು ತಿಳಿಸಿದರು.

# ಸಂಘರ್ಷದ ಬಳಿಕ ಸಹಜ ಸ್ಥಿತಿಯತ್ತ ಮದ್ದೂರು

## ಇಂದು ಸಾಮೂಹಿಕ ಗಣೇಶ ಮೂರ್ತಿ ವಿಸರ್ಜನೆ | ಬಿಗಿ ಪೊಲೀಸ್ ಬಂದೋಬಸ್ತ್

● ಪ್ರಜೋದಯ ವರದಿ

**ಬೆಂಗಳೂರು:** ಗಣೇಶೋತ್ಸವ ವೇಳೆ ನಡೆದ ಕಲ್ಲು ತೂರಾಟ, ಮರುದಿನದ ಪೊಲೀಸ್ ಲಾಠಿ ಚಾರ್ಜ್ ಖಂಡಿಸಿ ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ಮಂಗಳವಾರ ಹಿಂದೂಪರ ಸಂಘಟನೆಗಳು ನೀಡಿದ್ದ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಎರಡು ದಿನಗಳ ಕಾಲ ಬೂದಿ ಮುಚ್ಚಿದ ಕೆಂಡದಂತಿದ್ದ ಪರಿಸ್ಥಿತಿ ಈಗ ತಿಳಿಯಾಗಿದೆ.



ಮದ್ದೂರು ಪಟ್ಟಣ ಸೇರಿ ತಾಲ್ಲೂಕಿನ ಹಲವೆಡೆ ಪ್ರತಿಭಟನೆಗಳು ನಡೆದವು. ಪಟ್ಟಣಕ್ಕೆ ಬರುವ ಜನರು ಮತ್ತು ವಾಹನಗಳ ಸಂಖ್ಯೆಯೂ ಕಡಿಮೆ ಯಾಗಿತ್ತು. ಬೆಳಿಗ್ಗೆಯೇ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ಪಟ್ಟಣದ ನಾನಾ ರಸ್ತೆಗಳಲ್ಲಿ ಸಂಚರಿಸುತ್ತಾ, ತೆರೆದಿದ್ದ ಅಂಗಡಿ-ಮುಂಗಟ್ಟುಗಳು ಬಾಗಿಲು ಮುಚ್ಚಿಸಿದರು. ಹೀಗಾಗಿ ಬಹುತೇಕ ಎಲ್ಲಾ ಅಂಗಡಿ-ಮುಂಗಟ್ಟು, ವ್ಯಾಪಾರ ಕೇಂದ್ರಗಳು ಬಂದ್ ಆಗಿದ್ದವು. ಸರ್ಕಾರಿ ಕಚೇರಿ, ಶಾಲಾ-ಕಾಲೇಜು, ಬ್ಯಾಂಕ್, ಪೆಟ್ರೋಲ್ ಬಂಕ್‌ಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು.

**ವ್ಯಾಪಾರಿಗಳ ಸಂಕಷ್ಟ**

ಹಾಲಿನ ಬೂತ್, ಟೀ ಕ್ಯಾಂಟೀನ್, ಔಷಧ ಅಂಗಡಿಗಳಿಗೆ ಯಾವುದೇ ಅಡ್ಡಿ ಇರಲಿಲ್ಲ. ಅದರ ನಡುವೆ ರಸ್ತೆ ಬದಿಯಲ್ಲಿನ ಹಣ್ಣು-ಹೂವು, ತರಕಾರಿ ವ್ಯಾಪಾರಿಗಳು ಗ್ರಾಹಕರಿಗಾಗಿ ಕಾದು ಕುಳಿತ್ತಿದ್ದರು. ಜನರ ಓಡಾಟವಿಲ್ಲದ ಕಾರಣ ಹಣ್ಣು, ಹೂವು, ತರಕಾರಿ ವ್ಯಾಪಾರಸ್ಥರ ವ್ಯಾಪಾರ-ವಹಿವಾಟಿಗೂ ಧಕ್ಕೆಯುಂಟಾಗಿತ್ತು.

ಕೆಎಸ್‌ಆರ್‌ಟಿಸಿ ಬಸ್‌ಗಳು ಎಂದಿನಂತೆ ಕಾರ್ಯಾಚರಣೆ ನಡೆಸಿದವು. ಆದರೆ, ಮದ್ದೂರು ಪಟ್ಟಣದಲ್ಲಿ ಪ್ರಯಾಣಿಕರ ಕೊರತೆ ಕಂಡುಬಂದಿತು. ನಿಗದಿತ ಸಮಯಕ್ಕೆ ಬದಲಾಗಿ ಸ್ವಲ್ಪ ತಡವಾಗಿ ಬಸ್‌ಗಳು ನಿಲ್ದಾಣದಿಂದ ಹೊರಡುತ್ತಿದ್ದವು. ಕಲ್ಲು ತೂರಾಟದಿಂದ ಬಿಗುವಿನ ವಾತಾ ವರಣವಿರುವ ಮದ್ದೂರು ಪಟ್ಟಣದಲ್ಲಿ ಮುಂಜಾಗ್ರತಾ ಕ್ರಮವಾಗಿ ಹೆಚ್ಚಿನ ಸಂಖ್ಯೆ ಪೊಲೀಸ ರನ್ನು ನಿಯೋಜಿಸಿ ಬಂದೋಬಸ್ತ್ ಹಾಕಲಾಗಿದೆ. ಯಾವ ಪ್ರಮುಖ ವೃತ್ತ ಮತ್ತು ರಸ್ತೆಗೆ ಹೋದರೂ ಪೊಲೀಸರ ತಂಡ ಕಂಡು ಬರುತ್ತಿದ್ದವು.

ಮಂಡ್ಯ ಮಾತ್ರವಲ್ಲದೆ ನೆರೆಯ ಮೈಸೂರು, ಕೊಡಗು, ಹಾಸನ, ರಾಮನಗರ ಜಿಲ್ಲೆಗಳ ಜೊತೆಗೆ ತೆಲಂಗಾಣದಿಂದಲೂ ಪೊಲೀಸ್ ಸಿಬ್ಬಂದಿ ಕರೆಸಿ ಕೊಳ್ಳಲಾಗಿದೆ. ಮೈಸೂರು ದಕ್ಷಿಣ ವಲಯ ಡಿಐಜಿಪಿ ಬೋರಲಿಂಗಯ್ಯ ಪಟ್ಟಣದಲ್ಲಿ ಮೊಕ್ಕಾಂ ಹೂಡಿ ಬಂದೋಬಸ್ತ್ ಕಾರ್ಯ ನಿರ್ದೇಶನ ಮಾಡುತ್ತಿದ್ದಾರೆ. ಮದ್ದೂರು ವಕೀಲರ ಸಂಘದ ನೇತೃತ್ವದಲ್ಲಿ ವಕೀಲರು ಕೂಡ ನ್ಯಾಯಾಲಯದ ಕಲಾಪಗಳಿಂದ ಹೊರಗುಳಿದು ಪ್ರತಿಭಟಿಸಿದರು. ಕಲ್ಲುತೂರಾಟ ನಡೆಸಿ, ಮದ್ದೂರು ಪಟ್ಟಣದ ಇಂದಿನ ಪರಿಸ್ಥಿತಿಗೆ ಕಾರಣವಾದ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

**ಶಾಂತಿ ಕದಡುವುದೇ ಬಿಜೆಪಿ ಧ್ಯೇಯ**

ಮದ್ದೂರು ಬಂದ್ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಸಮಾಜದಲ್ಲಿ ಶಾಂತಿ ಕದಡುವುದೇ ಬಿಜೆಪಿಯ ಉದ್ದೇಶ. ಮದ್ದೂರಿನ ಪ್ರಕರಣಕ್ಕೆ ಸಂಬಂಧಿಸಿದಂತೆ, 21 ಜನರನ್ನು ಈಗಾಗಲೇ ಬಂಧಿಸಿದ್ದು, ಜಾತಿ ಧರ್ಮ ಗಳನ್ನು ಸರ್ಕಾರ ಪರಿಗಣಿಸದೇ, ತಪ್ಪು ಮಾಡಿದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವು ದೆಂದರು. ಗಲಭೆಯಲ್ಲಿ ನಿರತರಾಗಿದ್ದವರು ಯಾವುದೇ ಪಕ್ಷ, ಸಮುದಾಯವರೇ ಆಗಿದ್ದರೂ, ಕಾನೂನು ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ರಾಜ್ಯ ಸರ್ಕಾರದ್ದು. ಕೇಂದ್ರದಲ್ಲಿ ರೈತ ಚಳವಳಿಯಲ್ಲಿ ಅನೇಕ ರೈತರು ಪ್ರಾಣ ಕಳೆದುಕೊಂಡ ಸಂದರ್ಭದಲ್ಲಿ ಬಿಜೆಪಿ ಯವರು ಎಲ್ಲಿದ್ದರು. ಮಣಿಪುರದಲ್ಲಿ ನಡೆದ ಹಿಂಸಾಚಾರದ ಬಗ್ಗೆ ಯಾವುದೇ ಬಿಜೆಪಿಯವರು ಧ್ವನಿ ಎತ್ತಲಿಲ್ಲ ಏಕೆ. ಮಣಿಪುರದಲ್ಲಿ ಹಿಂಸಾಚಾರ ನಡೆದರೂ, ಪ್ರಧಾನಿಯವರು ಮಣಿಪುರಕ್ಕೆ ಭೇಟಿ ನೀಡಲೇ ಇಲ್ಲ ಎಂದರು.

## ಗಡುವು ಮುಗಿದರೂ ಪೂರ್ಣವಾಗದ ಹೆದ್ದಾರಿ ಕಾಮಗಾರಿ

» ಮೊದಲನೇ ಪುಟದಿಂದ

ರಸ್ತೆಗೆ ಅಡ್ಡಲಾಗಿ ಕುಳಿತು ನ್ಯಾಯಯುತ ಪರಿಹಾರ ಕೊಟ್ಟರಷ್ಟೇ ಕೆಲಸ ಮಾಡುತ್ತೇವೆಂದು ಪಟ್ಟು ಹಿಡಿದು ಪ್ರತಿಭಟಿಸಿದ್ದರು.

**ವಿಳಂಬಕ್ಕೆ ಕಾರಣ ಏನು :** ಒಂದೂವರೆ ವರ್ಷದ ಹಿಂದೆ ನಡೆದ ಸಭೆಯಲ್ಲಿ ಪ್ರತಿ ಗುಂಟೆಗೆ 36 ಸಾವಿರ ರೂ. ಪರಿಹಾರ ನೀಡಲು ತಾತ್ವಿಕ ಒಪ್ಪಿಗೆ ನೀಡಲಾಗಿತ್ತು. ಆದರೀಗ 11 ಸಾವಿರ ರೂ.ಗೆ ಇಳಿಕೆ ಮಾಡಿ ರುವುದು ಏಕೆಂಬುದು ರೈತರ ಪ್ರಶ್ನೆಯಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರಿಗೆ ರೈತರು ದಾಖಲಾತಿಗಳನ್ನು ಪ್ರದರ್ಶಿಸಿದ್ದು, ನ್ಯಾಯ ಕೊಡಿಸ ಬೇಕೆಂದು ಕೋರಿದ್ದಾರೆ. ಜಿಲ್ಲಾಧಿಕಾರಿ ಅವರು, ಅನ್ಯಾಯ ಪ್ರಶ್ನಿಸಿ ಕಾನೂನು ಹೋರಾಟ ನಡೆಸಲು ಅವಕಾಶವಿದೆ. ಅಭಿವೃದ್ಧಿ ಕೆಲಸಗಳಿಗೆ ಸಹಕಾರ ನೀಡುವುದು ಎಲ್ಲರ ಹೊಣೆಗಾರಿಕೆ. ಕಾಮಗಾರಿ ಪೂರ್ಣಗೊಳಿಸಲು ಸಹಕರಿಸು ವಂತೆ ಮನವಿ ಮಾಡಿದ್ದಾರೆ.

**ಹೆಸರಿಗಷ್ಟೇ ಹೆದ್ದಾರಿ-ಸಾವಿನ ಸವಾರಿ**

ಜಿಲ್ಲೆಯಲ್ಲಿ ಹಾದು ಹೋಗಿರುವ ಬಹುತೇಕ ರಸ್ತೆಗಳು ರಾಷ್ಟ್ರೀಯ ಹೆದ್ದಾರಿ ಎಂಬ ಬಿರುದು ಪಡೆದಿವೆಯಾದರೂ ಸಂಚಾರಕ್ಕೆ ಮಾತ್ರ ಪೂರಕವಾಗಿಲ್ಲ. ಬೆಂಗಳೂರು-ಮಂಗಳೂರು ರಸ್ತೆಯಲ್ಲಿ ಅಪಘಾತಗಳ ಸರಣಿ ಮುಂದುವರೆಯುತ್ತಲೇ ಇದೆ. ಮಳೆಗಾಲದಲ್ಲಿ ಈ ರಸ್ತೆಯಲ್ಲಿ ಸಂಚರಿಸುವುದು ಯಮಯಾತನೆ. ಚನ್ನರಾಯಪಟ್ಟಣ-ಹಾಸನ ಮಾರ್ಗದಲ್ಲಿ ಅವೈಜ್ಞಾನಿಕ ಹಂಪ್ಸ್, ನಿಲುಗಡೆಯಿಂದ ಅಪಘಾತಗಳು ನಿತ್ಯ ವರದಿ ಯಾಗುತ್ತಿವೆ. ಗ್ರಾಮಗಳ ಸಮೀಪ ಸುರಕ್ಷತಾ ಫಲಕ ಹಾಗು ರಸ್ತೆ ನಿಯಮ ಉಲ್ಲಂಘನೆ ಯಾಗದಂತೆ ಕ್ರಮ ಕೈಗೊಳ್ಳಬೇಕಿದೆ ಯಾದರೂ ಅವಶ್ಯಕ ಅನುದಾನ ದೊರೆಯದೆ ಕಾಮಗಾರಿ ಕುಂಠಿತಗೊಂಡಿದೆ. ಈ ಎಲ್ಲಾ ಸಮಸ್ಯೆಗೆ ಪರಿಹಾರ ಯಾವಾಗ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

## ಸ್ವಾವಲಂಬಿ ಛಲ ಇದ್ದವರಿಗೆ ಪಿಎಂಎಫ್‌ಎಂಇ ಸಹಕಾರಿ: ಡಿ.ಸಿ.

» ಮೊದಲನೇ ಪುಟದಿಂದ

**3 ಕೋ.ರೂ. ವರೆಗೆ ಸಹಾಯಧನ**

ಜಂಟಿ ಕೃಷಿ ನಿರ್ದೇಶಕ ಪಿ. ರಮೇಶ್‌ಕುಮಾರ್ ಅವರು ಮಾತನಾಡಿ, ಆಹಾರ ಸಂಸ್ಕರಣಾ ಚಟುವಟಿಕೆಗಳಲ್ಲಿ ತೊಡಗಿರುವ ಸ್ವ-ಸಹಾಯ ಸಂಘಗಳ ಸದಸ್ಯರಿಗೆ ದುಡಿಯುವ ಬಂಡವಾಳ ಮತ್ತು ಸಣ್ಣ ಉಪಕರಣಗಳ ಖರೀದಿಗಾಗಿ ಪ್ರತಿ ಸದಸ್ಯರಿಗೆ 40 ಸಾವಿರ ರೂ. ಕಡಿಮೆ ಬಡ್ಡಿ ದರದ ಸಾಲದ ಜೊತೆಗೆ ಪ್ರತಿ ಸ್ವ-ಸಹಾಯ ಸಂಘಕ್ಕೆ 4 ಲ.ರೂ. ಪಡೆಯಲು ಅವಕಾಶವಿದೆ ಎಂದು ತಿಳಿಸಿದರು.

ಸಾಮಾನ್ಯ ಮೂಲಸೌಕರ್ಯ ಸೃಷ್ಟಿಗೆ ಶೇ.35 ರಷ್ಟು ಸಾಲ ಸಂಪರ್ಕಿತ ಸಹಾಯಧನ, 3 ಕೋ.ರೂ.ವರೆಗೆ ಸಹಾಯಧನ ನೀಡಲಾಗುತ್ತಿದೆ. ಅದಕ್ಕೆ ರೈತ ಉತ್ಪಾದಕರ ಸಂಸ್ಥೆಗಳು, ಕಂಪನಿಗಳು, ಸಹಕಾರಿಗಳು, ಸ್ವ-ಸಹಾಯ ಸಂಘಗಳು ಮತ್ತು ಅದರ ಒಕ್ಕೂಟ ಮತ್ತು ಸರ್ಕಾರಿ ಸಂಸ್ಥೆಗಳು ಅರ್ಹ. ಅರ್ಜಿದಾರರ ಸಂಸ್ಥೆಯ ಕನಿಷ್ಟ ವಹಿವಾಟು ಮತ್ತು ಅನುಭವದ ಯಾವುದೇ ಪೂರ್ವ ಷರತ್ತುಗಳಿಲ್ಲ. ವಿಂಗಡಣೆ, ಶ್ರೇಣೀಕರಣ, ಸಂಗ್ರಹಣೆ, ಸಾಮಾನ್ಯ ಸಂಸ್ಕರಣೆ, ಪ್ಯಾಕೇಜಿಂಗ್ ಮತ್ತು ಪ್ರಯೋಗಾಲಯ ಇತ್ಯಾದಿ ಘಟಕ ಸ್ಥಾಪಿಸಲು ಅವಕಾಶವಿದೆ ಎಂದರು.

ಬ್ರಾಂಡಿಂಗ್ ಮತ್ತು ಮಾರುಕಟ್ಟೆ ಚಟುವಟಿಕೆಗಳಾದ ಪ್ಯಾಕೇಜಿಂಗ್, ಜಾಹೀರಾತು, ಸಾಮಾನ್ಯ ಬ್ರಾಂಡ್ ಅಭಿವೃದ್ಧಿ, ಚಿಲ್ಲರೆ ಮಾರಾಟ ಸಂಸ್ಥೆಗಳೊಂದಿಗೆ ಒಡಂಬಡಿಕೆಗಾಗಿ ಶೇ.50 ರಷ್ಟು ಸಹಾಯಧನ ದೊರೆಯುತ್ತದೆ. ಅದಕ್ಕೆ ರೈತ ಉತ್ಪಾದಕರ ಸಂಸ್ಥೆಗಳು, ಕಂಪನಿಗಳು, ಸಹಕಾರಿ, ಸ್ವ-ಸಹಾಯ ಸಂಘ, ಸಹಕಾರಿ ಸಂಸ್ಥೆ ಮತ್ತು ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ವಿಶೇಷ ಉದ್ದೇಶ ಸಂಸ್ಥೆ ಅರ್ಹ ಸಂಸ್ಥೆಗಳಾಗಿರುತ್ತವೆಂದು ಹೇಳಿದರು.

ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಯೋಗೇಶ್, ಉದ್ಯಮಿದಾರರು, ರೈತರು ಭಾಗವಹಿಸಿದ್ದರು.

## ಪತ್ರಕರ್ತ ವೆಂಕಟೇಶ್‌ಗೆ ಸಂಪಾದಕ ರತ್ನ ಪ್ರಶಸ್ತಿ

● ಪ್ರಜೋದಯ ವರದಿ



**ಹಾಸನ:** ಪತ್ರಕರ್ತ ವೆಂಕಟೇಶ್ ಅವರು ಬೆಂಗಳೂರಿನ ಅನ್ವೇಷಣಾ ಸಾಂಸ್ಕೃತಿಕ ಅಕಾಡೆಮಿ ನೀಡುವ ಸಂಪಾದಕ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕಳೆದ 30 ವರ್ಷಗಳಿಂದ ಪತ್ರಿಕಾ ರಂಗದಲ್ಲಿರುವ ವೆಂಕಟೇಶ್ ಅವರು ಕಳೆದ ಐದು ವರ್ಷ ಗಳಿಂದ ಉದಯ ವರದಿ ದಿನಪತ್ರಿಕೆ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವೆಂಕಟೇಶ್ ಅವರ ಸುದೀರ್ಘ ಸೇವೆ ಪರಿಗಣಿಸಿ ಪ್ರಶಸ್ತಿಗೆ ಪರಿಗಣಿಸಲಾಗಿದೆ. ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದು ಅನ್ವೇಷಣಾ ಸಾಂಸ್ಕೃತಿಕ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷರು ಹಾಗು ಉಪಾಧ್ಯಕ್ಷರು ತಿಳಿಸಿದ್ದಾರೆ.

## ಅಪಘಾತ: ವ್ಯಕ್ತಿ ಸಾವು

**ಬೇಲೂರು:** ಬೈಕ್‌ಗಳ ಪರಸ್ಪರ ಮುಖಾಮುಖಿ ಡಿಕ್ಕಿಯಾಗಿ ವ್ಯಕ್ತಿ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ತಾಲ್ಲೂಕಿನ ದೇವಿಹಳ್ಳಿ-ಸಂಕೇನಹಳ್ಳಿ ಮಾರ್ಗಮಧ್ಯೆ ನಡೆದಿದೆ.

ದೇವಿಹಳ್ಳಿ ಗ್ರಾಮದ ಬ್ರಹ್ಮದೇವರ (63) ಮೃತರು. ಕಾರ್ಯನಿಮಿತ್ತ ಬ್ರಹ್ಮದೇವರ ಅವರು ಸಂಕೇನಹಳ್ಳಿ ತೆರಳುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಮಾಡಿ ದ್ದಾನೆ. ಅಪಘಾತದ ರಭಸಕ್ಕೆ ಗಂಭೀರ ಗಾಯಗೊಂಡಿದ್ದ ಇಬ್ಬರನ್ನೂ ಹಿಮ್ಸ್‌ಗೆ ದಾಖಲಿಸಲಾ ಗಿತ್ತು. ಚಿಕಿತ್ಸೆ ಫಲಿಸದೆ ಬ್ರಹ್ಮದೇವರ ಮೃತಪಟ್ಟಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಾಸನದಲ್ಲಿ ಸೆ.12ಕ್ಕೆ ಜೀ ಕನ್ನಡ ಆಡಿಷನ್




**ಹಾಸನ:** ಕನ್ನಡದ ಜನಪ್ರಿಯ ಸುದ್ದಿ ವಾಹಿನಿ ಜೀ ಕನ್ನಡದ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್, ಕಾಮಿಡಿ ಕಿಲಾಡಿಗಳು ಶೋಗೆ ಕಲಾವಿದರ ಆಯ್ಕೆಗಾಗಿ ಸೆ.12ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ನಗರದ ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾಶಾಲೆಯಲ್ಲಿ ಆಡಿಷನ್ ನಡೆಯಲಿದೆ.

ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಕಾರ್ಯಕ್ರಮಕ್ಕೆ ಆಸಕ್ತರು ಉತ್ತಮ ನೃತ್ಯ ಪಟುವಾಗಿರಬೇಕು. ಕಾಮಿಡಿ ಕಿಲಾಡಿಗಳಲ್ಲಿ ಭಾಗವಹಿಸುವುದಾದರೆ ಸ್ವರಚಿತ ಕಾಮಿಡಿ ಸ್ಕಿಟ್ ಇರಬೇಕು. ರೀಲ್ಸ್ ವಿಡಿಯೋಗಳಿಗೆ ಅವಕಾಶವಿಲ್ಲ. ಆಸಕ್ತರು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ವಿಳಾಸದ ಜೆರಾಕ್ಸ್ ಪ್ರತಿ ತರುವುದು ಕಡ್ಡಾಯ. ಆಡಿಷನ್‌ಗೆ ಯಾವುದೇ ಶುಲ್ಕ ನಿಗದಿಪಡಿಸಿಲ್ಲ.

## ಸ್ಮಾರ್ಟ್ ಬಜಾರ್‌ನಲ್ಲಿ ಕಳಪೆ ಆಹಾರ ಪದಾರ್ಥ

» ಮೊದಲನೇ ಪುಟದಿಂದ

ಜಿಲ್ಲಾ ಅಂಕಿತ ಅಧಿಕಾರಿ ಡಾ.ಶಶಿಧರ್ ಅವರು ಮಾತನಾಡಿ, ಪರಿಶೀಲನೆ ವೇಳೆ ಕಳಪೆ ಆಹಾರ ಮಾರಾಟ ಮಾಡುತ್ತಿರುವುದು ಕಂಡು ಬಂದಿರುವುದರಿಂದ ನೋಟೀಸ್ ನೀಡಲಾಗಿದೆ. ಈ ಬಗ್ಗೆ ನ್ಯಾಯಾಲಯದಲ್ಲಿ ದೂರು ದಾಖಲು ಮಾಡುತ್ತೇವೆ. ಇವರ ವಿರುದ್ಧ ದಂಡ ವಿಧಿಸಲಾಗುತ್ತದೆ. ನಂತರವೂ ತಿದ್ದುಕೊಳ್ಳದಿದ್ದರೆ ಜೈಲು ಶಿಕ್ಷೆಯೂ ಆಗುತ್ತದೆ ಎಂದು ಹೇಳಿದರು.

ನಿರಂತರವಾಗಿ ಆಹಾರ ಗುಣಮಟ್ಟ ಪರಿಶೀಲನೆ ನಡೆಸುತ್ತಿದ್ದೇವೆ. ಈ ವರೆಗೂ 54 ಪ್ರಕರಣಗಳನ್ನು ದಾಖಲಿಸಿದ್ದೇವೆ. 32 ಪ್ರಕರಣಗಳು ಇತ್ಯಾರ್ಥವಾಗಿವೆ. ಇನ್ನು 22 ಪ್ರಕರಣಗಳು ಬಾಕಿ ಇವೆ. ಜೆಎಂಎಫ್‌ಸಿಯಲ್ಲಿ 8 ಪ್ರಕರಣಗಳು ನಡೆಯುತ್ತಿವೆ. ನಗರದಲ್ಲಿ ನಿರಂತರವಾಗಿ ಆಹಾರಗಳ ಪರೀಕ್ಷೆ ಮಾಡುವ ಕೆಲಸ ನಡೆಯುತ್ತಿದೆ. ಈ ಬಗ್ಗೆ ಗ್ರಾಹಕರು ಎಚ್ಚೆತ್ತುಕೊಂಡು ಪ್ರಶ್ನಿಸಿದರೆ ಮಾತ್ರ ಇನ್ನೂ ಹೆಚ್ಚಿನ ಪ್ರಕರಣಗಳು ಬೆಳಕಿಗೆ ಬರುತ್ತವೆ ಎಂದು ಹೇಳಿದರು.

ತಾಲ್ಲೂಕು ಆಹಾರ ಸುರಕ್ಷತಾ ಅಧಿಕಾರಿ ಡಾ.ವಿಜಯ್ ಗೊರೂರು ಅವರು ಮಾತನಾಡಿ, ಮೂರು ದಿನಗಳ ಹಿಂದೆ ಇದೇ ಬಜಾರ್‌ನಲ್ಲಿ ಹೆಸರು ಕಾಳು ಫಂಗಸ್ ಬಂದಿರುವ ಬಗ್ಗೆ ಗ್ರಾಹಕರೊಬ್ಬರು ವಿಡಿಯೋದಲ್ಲಿ ಆರೋಪ ಮಾಡಿದ್ದರೂ ಆದರೂ ತಿದ್ದಿಕೊಳ್ಳದೆ ಇದ್ದರಿಂದ ಇಂದು ದಾಳಿ ಮಾಡಿದ ಸಂದರ್ಭದಲ್ಲಿ ಇನ್ನಷ್ಟು ಕಳಪೆ ಆಹಾರಗಳು ಪತ್ತೆಯಾಗಿದೆ. ಜಿಲ್ಲಾಧಿಕಾರಿ, ಜಿಲ್ಲಾ ರೋಗ್ಯಾಧಿಕಾರಿ ಮಾರ್ಗದರ್ಶನದಲ್ಲಿ ಪ್ರತಿದಿನ ದಾಳಿ ನಡೆಸುವ ಕೆಲಸ ನಡೆಯುತ್ತಿದೆ. ಎಚ್ಚೆತ್ತುಕೊಳ್ಳದಿದ್ದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

## ಅಧಿಕಾರಿಗಳ ದುರ್ನಡತೆಯನ್ನು ಸಾರ್ವಜನಿಕರು ಖಂಡಿಸಬೇಕು : ಹೆಚ್.ಕೆ.ಸುರೇಶ್

» ಮೊದಲನೇ ಪುಟದಿಂದ

ಯಾವುದೇ ಕಾರಣಕ್ಕೂ ಭ್ರಷ್ಟಾಚಾರಕ್ಕೆ ತಲೆಬಾಗುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳು ರೈತರ ಜೀವನಾಡಿಯಾಗಿವೆ. ಈ ಇಲಾಖೆಗಳು ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸಿದರೆ ರೈತರು ಉತ್ತಮ ಬೆಳೆಯಲು ಸಾಧ್ಯ. ಈ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆಯಿಂದ 20 ಟ್ರ್ಯಾಕ್ಟರ್, ಐದು ಕೊಬ್ಬರಿ ಶೆಡ್ , ನಾಲ್ಕು ಫಾರಂ ಗೇಟ್, ದಾಳಿಂಬೆ ಗಿಡ ಜೊತೆಗೆ ಮಲೆನಾಡು ಭಾಗದಲ್ಲಿ ಮೆಣಸು ಬೆಳೆಗೆ ಹೆಚ್ಚು ಪ್ರಾಮುಖ್ಯತೆ ಇರುವುದರಿಂದ ಐನೂರಕ್ಕೂ ಹೆಚ್ಚು ರೈತರಿಗೆ ಗಿಡಗಳು ಹಾಗೂ ಔಷಧಿಯನ್ನು ನೀಡಲಾಗುತ್ತಿದೆ ಎಂದರು.

ರೈತ ಮುಖಂಡರಾದ ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಕೌರಿ ಸಂಜಯ್, ಬಸವರಾಜ್, ಧರ್ಮೇಗೌಡ, ವಿಜಯ್ ಕುಮಾರ್, ಬಿರಟೆಮನೆ ಸುರೇಶ್, ಬಂಡೆ ರಮೇಶ್ ಶೇಖರ್ ಸಂಗಪ್ಪ ಮೋಹನ್ ಹಾಗೂ ಇಲಾಖೆ ಅಧಿಕಾರಿ ಸತೀಶ್, ಮಧು ಇದ್ದರು

# ವರ್ತಕರ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ

● ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ವರ್ತಕರ ಸಮಸ್ಯೆಗಳನ್ನು ಬಗೆಹರಿಸಲು ಸಂಘವು ಪ್ರಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ವರ್ತಕರ ಸಂಘದ ಅಧ್ಯಕ್ಷ ಬಿ.ಎಂ.ಮಧುಕುಮಾರ್ ಅವರು ಹೇಳಿದರು.

ಪಟ್ಟಣದ ಸಣ್ಣೇಗೌಡ ಕಾಂಪ್ಲೆಕ್ಸ್‌ನಲ್ಲಿ ನಡೆದ ತಾಲ್ಲೂಕು ವರ್ತಕರ ಸಂಘದ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ವರ್ತಕರ ಹಾಗೂ ಉದ್ಯಮಿಗಳ ಅನುಕೂಲಕ್ಕಾಗಿ ಸರ್ಕಾರದ ಸವಲತ್ತುಗಳು ಹಾಗೂ ನೀತಿ ನಿಯಮಗಳನ್ನು ತಿಳಿಸುವ ಕಾರ್ಯಾಗಾರವನ್ನು ಈ ಬಾರಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಆಯೋಜಿಸಲಾಗಿತ್ತು. ಇಂತಹ ಸವಲತ್ತುಗಳನ್ನು ವರ್ತಕರು ಸದುಪಯೋಗಪಡಿಸಿಕೊಳ್ಳಬೇಕು. ಪಟ್ಟಣದಲ್ಲಿ ಅಂಗಡಿಗಳ ಸರಣಿ ಕಳ್ಳತನ ಹಾಗೂ ಟ್ರಾಫಿಕ್ ಸಮಸ್ಯೆಗಳ ಕುರಿತು ಪೊಲೀಸರ ಜೊತೆ ಹಲವು ಬಾರಿ ಚರ್ಚೆ ನಡೆಸಲಾಗಿದೆ. ಈ ಬಗ್ಗೆ ಶಾಸಕರೊಂದಿಗೆ ಮಾತುಕತೆ ನಡೆಸಿದ್ದು, ಮುಂದಿನ ದಿನಗಳಲ್ಲಿ ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದೆಂದು ಭರವಸೆ ನೀಡಿದ್ದಾರೆ ಎಂದರು.



ಸಂಘವು ನಿರ್ದೇಶಕರ ಸಹಕಾರದಿಂದ ಹಲವು ಸಮಾಜಮುಖಿ ಕೆಲಸಗಳನ್ನು ಕೈಗೊಂಡಿದೆ. ತಾಲ್ಲೂಕಿನಲ್ಲಿರುವ ಎಲ್ಲಾ ವ್ಯಾಪಾರಸ್ಥರು ಸಂಘದ ಸದಸ್ಯತ್ವ ಪಡೆದು ಕಾರ್ಯಚಟುವಟಿಕೆಗಳಲ್ಲಿ ಸಹಕರಿಸಬೇಕು. ಮುಂದಿನ ದಿನಗಳಲ್ಲಿ ವರ್ತಕರ ಸಂಘಕ್ಕೆ ಸ್ವಂತ ನಿವೇಶನ ಖರೀದಿಸಿ ಕಟ್ಟಡ ವನ್ನು ನಿರ್ಮಿಸುವ ಉದ್ದೇಶವಿದೆ. ಈ ಕಾರ್ಯಕ್ಕೆ ಎಲ್ಲಾ ವರ್ತಕರು ಸಹಕರಿಸಬೇಕೆಂದರು.

ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಮಂಜುನಾಥ ಅವರು ಕಳೆದ ಸಾಲಿನ ವಾರ್ಷಿಕ ಕಾರ್ಯಕ್ರಮ ವರದಿಯನ್ನು ಮಂಡಿಸಿದರು. ಖಜಾಂಜಿ ಸತ್ಯನಾರಾಯಣ ಅವರು ಲೆಕ್ಕಪತ್ರಗಳನ್ನು ಓದಿ ಸಭೆಗೆ ಮಾಹಿತಿ ನೀಡಿದರು.

ಸಕಲೇಶಪುರ ತಾಲ್ಲೂಕು ವರ್ತಕರ ಸಹಕಾರ ಸಂಘದ 2ನೇ ವರ್ಷದ ಮಹಾಸಭೆ ಸಹ ಸಂಘದ ಅಧ್ಯಕ್ಷ ಹೆಚ್.ಎಸ್.ಉದಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ವರ್ತಕರಿಗೆ ಆಕರ್ಷಕ ಬಡ್ಡಿದರದಲ್ಲಿ ಸಾಲ ಸೌಲಭ್ಯವನ್ನು ನೀಡಲಾಗುತ್ತಿದೆ. ಠೇವಣಿದಾರರಿಗೆ ಸಹ ಶೇ. 8ರಷ್ಟು ಬಡ್ಡಿ ನೀಡಲಾಗುತ್ತಿದ್ದು, ಎಲ್ಲಾ ವರ್ತಕರು ಸದುಪಯೋಗ ಪಡೆಯಬೇಕೆಂದು ಹೇಳಿದರು.

ವರ್ತಕರ ಸಂಘದ ಉಪಾಧ್ಯಕ್ಷ ಜವಾಲ್ಲಾಲ್ ಜೈನ್, ಸಹಕಾರ್ಯದರ್ಶಿ ಬಿ.ಜಿ.ಲೋಹಿತ್, ಜೆ.ಸಿ.ರಾಘವೇಂದ್ರ, ಸಹಕಾರ ಸಂಘದ ಉಪಾಧ್ಯಕ್ಷ ಟಿ.ರಾಜ್‌ಕುಮಾರ್ ಹಾಜರಿದ್ದರು.

## ಬಿಲ್ ಕೇಳಿದ್ದಕ್ಕೆ ಹಲ್ಲೆ, ಸಾಮಾಗ್ರಿ ನಾಶ

● ಪ್ರಜೋದಯ ವರದಿ

**ಹಾಸನ:** ಕಂಠಪೂರ್ತಿ ಕುಡಿದು ಬಿಲ್ ಕೇಳಿದಾಗ ಐವರು ಸೇರಿ ರೆಸ್ಟೋರೆಂಟ್‌ನ ಕುರ್ಚಿ, ಕಿಟಕಿ ಗಾಜು ಒಡೆದು ಮದ್ಯದ ಬಾಟಲಿಯಿಂದ ಸಿಬ್ಬಂದಿ ತಲೆಗೆ ಹೊಡೆದಿರುವ ಘಟನೆ ನಗರದ ಕ್ವಾಲಿಟಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ನಡೆದಿದೆ.

ನಗರದ ರಘು, ದರ್ಶನ್, ತೇಜು, ಲಕ್ಷ್ಮೀಶ ಹಾಗು ಉಮೇಶ ದಾಂಧಲೆ ಮಾಡಿದವರು. ಸೆ.7ರ ಮಧ್ಯಾಹ್ನ ರೆಸ್ಟೋರೆಂಟ್‌ಗೆ ಬಂದಿದ್ದ ಅವರು ಮದ್ಯ ಹಾಗು ಊಟ ಆರ್ಡರ್ ಮಾಡಿ ದ್ದಾರೆ. ಸಂಜೆ 7.30ಕ್ಕೆ ಸಿಬ್ಬಂದಿ ಸುದೀಪ್ 18,250 ರೂ. ಬಿಲ್ ಕೊಟ್ಟಿದ್ದು ಆಗ ಹಣ ಹೊಂದಿ ಸಲು ಸಾಧ್ಯವಾಗದೆ ಅವರವರೇ ಜಗಳ ಮಾಡಿಕೊಂಡಿದ್ದಾರೆ.

ಈ ನಡುವೆ ರಘು ಏಕಾಏಕಿ ಕುರ್ಚಿಯನ್ನು ಟೇಬಲ್ ಮೇಲೆ ಎಸೆದು ಸಾಮಾಗ್ರಿಗಳನ್ನೆಲ್ಲ ಒಡೆದು ಹಾಕಿದ್ದಾನೆ. ಅದನ್ನು ಪ್ರಶ್ನಿಸಿದಕ್ಕೆ ಸುದೀಪ್‌ನ ತಲೆಗೆ ಗಾಜಿನ ಮದ್ಯದ ಬಾಟಲಿಯಿಂದ ಹೊಡೆದಿದ್ದಾನೆ. ರಘು ಜೊತೆಗೆ ಉಳಿದ ನಾಲ್ವರು ಸೇರಿ ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ನಾಶ ಪಡಿಸಿದ್ದಾರೆ. ಬಾರ್‌ನಲ್ಲಿ ಜೋರು ಗಲಾಟೆಯಾಗುತ್ತಿದ್ದಂತೆ ಬೇರೆ ಟೇಬಲ್‌ನಲ್ಲಿ ಕುಳಿತಿದ್ದವರು ಸಹ ಬಿಲ್ ಪಾವತಿಸದೆ ಹಾಗೇ ಹೋಗಿದ್ದಾರೆ. ಈ ಘಟನೆಯಿಂದ ಸುಮಾರು 1 ಲಕ್ಷ ರೂ. ನಷ್ಟ ವುಂಟಾಗಿದೆ. ನಷ್ಟ ಭರ್ತಿ ಹಾಗು ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ಸಮ ಸಮಾಜ ನಿರ್ಮಾಣದಲ್ಲಿ ಗುರುಗಳ ಪಾತ್ರ ಅಧಿಕ



● ಪ್ರಜೋದಯ ವರದಿ

**ಹಾಸನ:** ಸದೃಢ ಸಮಾಜ ನಿರ್ಮಾಣದಲ್ಲಿ ಗುರುಗಳು ವಹಿಸುವ ಪಾತ್ರ ಅತ್ಯ ಮೂಲ್ಯವಾಗಿರುತ್ತದೆಂದು ಹಳೇಬೀಡು ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಹೇಳಿದರು.

ನಗರದ ತಣ್ಣೀರುಹಳ್ಳ ಮಠದ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಆಶೀರ್ವಚನ ನೀಡಿದ ಅವರು, ಗುರುಗಳ ಸೇವೆ, ತ್ಯಾಗ ಮತ್ತು ಸಮಾಜ ನಿರ್ಮಾಣದಲ್ಲಿ ಅವರ ಪಾತ್ರ ಅತ್ಯಧಿಕವಾಗಿರುತ್ತದೆ. ಸಮಾಜದ ನವೀನ ಪೀಳಿಗೆಯನ್ನು ರೂಪಿಸುವ ಶಕ್ತಿ ಗುರುಗಳಲ್ಲಿ ಅಡಕವಾಗಿದೆ. ಮಹಾಸಭಾ ವತಿಯಿಂದ ನಡೆಯುತ್ತಿರುವ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಮತ್ತು ಎಲ್ಲರೂ ಆಸಕ್ತಿಯಿಂದ ವಿನೂತನ ಕಾರ್ಯಕ್ರಮ ಆಚರಿಸು ತ್ತಿರುವುದರ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಸೆ.21ರ ಭಾನುವಾರ ನಡೆಯುವ ಬಸವ ಸಂಸ್ಕೃತಿ ಅಭಿಯಾನ ಯಶಸ್ಸಿಗೆ ಎಲ್ಲರೂ ಸಹಕರಿಸ ಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅರ್ಥಪೂರ್ಣ ಕಾರ್ಯಕ್ರಮ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದಿಂದ ಶಿಕ್ಷಕರಾದ ಜಯಶೀಲಮ್ಮ, ವಿ.ಎಸ್.ರಾಣಿ, ನಿವೃತ್ತ ಶಿಕ್ಷಕ ಯು.ಎಸ್.ಬಸವರಾಜ್, ಸೋಮಶೇಖರ್, ಮಲ್ಲಿಕಾರ್ಜುನ್, ರಾಧಿಕಾ, ಗೌರಿ, ಅನುಸೂಯಾ ಅವರನ್ನು ಸನ್ಮಾನಿಸಲಾಯಿತು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ಮಹಿಳಾ ಘಟಕದ ಅಧ್ಯಕ್ಷೆ ಚಂದ್ರಮತಿ, ತಾಲ್ಲೂಕು ಅಧ್ಯಕ್ಷೆ ಮಮತಾ ಪಾಟೀಲ್ ಇತರರಿದ್ದರು.

# ಬೀದಿ ನಾಯಿಗಳ ಆಶ್ರಯ ತಾಣ ಕ್ರೀಡಾಂಗಣ

● ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕ್ರೀಡಾಂಗಣ ಕ್ರೀಡಾಪಟುಗಳು, ವಾಯು ವಿಹಾರಿಗಳಿಗಿಂತ ಬೀದಿ ನಾಯಿಗಳ ಆಶ್ರಯ ತಾಣವಾಗಿ ಮಾರ್ಪಟ್ಟಿದೆ.

ಕ್ರೀಡಾಂಗಣದ ಹಿಂಭಾಗವೇ ಫುಡ್‌ಕೋರ್ಟ್ ಇರುವುದರಿಂದ ಶ್ವಾನಗಳಿಗೆ ಆಹಾರ ಕೊರತೆ ಇಲ್ಲದಂತಾಗಿದೆ. ಅದರಿಂದಾಗಿ ಅಲ್ಲಿರುವ ನಾಯಿಗಳು ಕ್ರೀಡಾಂಗಣವನ್ನೇ ತಮ್ಮ ವಾಸಸ್ಥಾನ ವಾಗಿ ಮಾಡಿಕೊಂಡು ಮರಿಗಳಿಗೆ ಜನ್ಮ ನೀಡಿ ತಮ್ಮ ಸಂತತಿಯನ್ನು ಇನ್ನಷ್ಟು ಹೆಚ್ಚಿಸಿಕೊಂಡಿವೆ.

ದಸರಾ ಕ್ರೀಡಾಕೂಟ, ಶಾಲಾ ಮತ್ತು ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟಗಳನ್ನು ನಡೆಸಲು ಖೋ-ಖೋ ಅಂಕಣ ಸಿದ್ಧಪಡಿಸಲೆಂದು ಮಣ್ಣು ಸುರಿದು ಸಮತಟ್ಟು ಮಾಡಲಾ ಗುತ್ತಿದೆ. ಅದೇ ಜಾಗದಲ್ಲಿ 10ಕ್ಕೂ ಹೆಚ್ಚು ಬೀದಿ ನಾಯಿಗಳು ಮಲಗಿ, ಮಣ್ಣನ್ನು ಕೆರೆದು, ಗುಂಡಿ ಮಾಡಿ ಹಾಳು ಮಾಡಿವೆ.



ಬೀದಿ ನಾಯಿಗಳ ಭೀತಿಯಿಂದ ಸಾರ್ವಜನಿಕರು, ಆಟಗಾರರು ಮುಂಜಾನೆ ಮತ್ತು ಸಂಜೆ ಸಮಯಲ್ಲಿ ಕ್ರೀಡಾಂಗಣಕ್ಕೆ ಕ್ರೀಡಾ ಚಟುವಟಿಕೆ ಮತ್ತು ವ್ಯಾಯಾ ಮಕ್ಕಾಗಿ ಬರಲು ಭಯ ಪಡುವ ಸ್ಥಿತಿ ನಿರ್ಮಾಣವಾಗಿದೆ. ಪೋಷಕರು ತಮ್ಮ ಮಕ್ಕಳನ್ನು ಆಟವಾಡಲು ಮೈದಾನಕ್ಕೆ ಕರೆತಲು ಹಿಂದೇಟು ಹಾಕುವಂತಾಗಿದೆ.

ಪ್ರತಿ ದಿನ ನೂರಾರು ಮಂದಿ ಕ್ರೀಡಾಂಗಣಕ್ಕೆ ವಾಕಿಂಗ್, ರನ್ನಿಂಗ್ ಮಾಡಲು ಆಗಮಿಸುತ್ತಾರೆ. ಆದರೆ, ನಾಯಿಗಳ ಗುಂಪು ಕ್ರೀಡಾಂಗಣದ ತುಂಬೆಲ್ಲಾ ಓಡಾಡುವುದರಿಂದ, ಜನರು ವ್ಯಾಯಾಮ ಮಾಡಲು ಹೆದರುವಂತಾಗಿದೆ. ಮಕ್ಕಳು, ವೃದ್ಧರು, ಮಹಿಳೆಯರಿಗೆ ಬೀದಿ ನಾಯಿಗಳಿಂದ ಸುರಕ್ಷತೆಯೇ ಇಲ್ಲವಾಗಿದೆ.

ನಾಯಿಗಳ ಕಾಟ ಹಲವು ದಿನಗಳಿಂದ ಮುಂದುವರೆದಿದ್ದರೂ, ಮಹಾನಗರ ಪಾಲಿಕೆ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಸುಮ್ಮನಿರುವುದು ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಸರ್ಕಾರ ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸಲು ಕೋಟ್ಯಾಂತರ ವೆಚ್ಚ ಮಾಡಿ ಕ್ರೀಡಾಂಗಣ ನಿರ್ಮಿಸಿದೆ. ಅದನ್ನು ನಿರ್ವಹಣೆ ಮಾಡಲು ಅಧಿಕಾರಿಗಳು ತಲೆಕೆಡಿಸಿಕೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



## ಬೂವನಹಳ್ಳಿಯಲ್ಲಿ ಸ್ಮಶಾನಕ್ಕೆ ಜಾಗ ನಿಗದಿ

● ಪ್ರಜೋದಯ ವರದಿ

**ಹಾಸನ:** ನಗರ ಹೊರವಲಯದ ಬೂವನಹಳ್ಳಿ ಗ್ರಾಮದಲ್ಲಿ ವಿವಿಧ ಸಮಸ್ಯೆಗಳ ಬಗ್ಗೆ ದೂರುಗಳು ಕೇಳಿಬಂದ ಹಿನ್ನಲೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಂಗಳವಾರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮದಲ್ಲಿ ಪ್ರಮುಖವಾಗಿ ಸ್ಮಶಾನ ಜಾಗಕ್ಕೆ ತೊಂದರೆ ಕಂಡುಬಂದಿದ್ದರಿಂದ ಜಾಗ ಗುರುತು ಮಾಡಿ ಸ್ಮಶಾನಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಕಾಮಗಾರಿ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ಗ್ರಾಮಸ್ಥರ ಸುರಕ್ಷತಾ ಹಿತ ದೃಷ್ಟಿಯಿಂದ ಬೂವನಹಳ್ಳಿ ಕೆರೆ ಬದಿಗೆ ತಡೆಗೋಡೆ ನಿರ್ಮಾಣ ಮಾಡಲು ತೀರ್ಮಾನ ಕೈಗೊಂಡು ಆದಷ್ಟು ಬೇಗ ಕಾಮಗಾರಿ ಮುಗಿಸಿ ಕೊಡಲಾ ಗುವುದೆಂದು ಭರವಸೆ ನೀಡಿದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸ್ವಾಮಿಗೌಡ, ಗ್ರಾಮದ ಮುಖಂಡರು ಹಾಜರಿದ್ದರು.

## ಚಾಡಿ ಹೇಳಿದ್ದಕ್ಕೆ ಮಾರಣಾಂತಿಕ ಹಲ್ಲೆ

● ಪ್ರಜೋದಯ ವರದಿ

**ಹಾಸನ:** ತನ್ನ ಕುರಿತು ಚಾಡಿ ಹೇಳಿದರೆಂದು ಆರೋಪಿಸಿ ಯುವಕನೊಬ್ಬ ಮಚ್ಚಿನಿಂದ ಇಬ್ಬರ ಮೇಲೆ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಜಿ. ಮೈಲನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪ್ರಕಾಶ್ ಹಾಗು ಸಹೋದರ ಹುಚ್ಚೇಗೌಡ ಗಾಯಾಳುಗಳು. ನಾಗರಾಜು ಅವರ ಪುತ್ರ ಶಿವಕುಮಾರ್ ಎಂಬಾತ ಹಲ್ಲೆ ನಡೆಸಿದ್ದಾನೆ. ಸೋಮವಾರ ಸಹೋದರರು ಜಮೀನು ಕೆಲಸ ಮುಗಿಸಿ ಮನೆಗೆ ಬರುತ್ತಿದ್ದಾಗ ಬೈಕ್‌ನಲ್ಲಿ ಎದುರಾದ ಶಿವಕುಮಾರ್ ಅವಾಚ್ಯ ಶಬ್ದ ಗಳಿಂದ ನಿಂದಿಸುತ್ತಾ, ನನ್ನ ಬಗ್ಗೆ ತಂದೆ-ತಾಯಿಗೆ ಚಾಡಿ ಹೇಳುತ್ತೀರಾ ಎಂದು ಮಚ್ಚಿನಿಂದ ಹಲ್ಲೆ ನಡೆಸಿದ್ದಾನೆ. ಪ್ರಕಾಶ್ ಅವರ ತಲೆ ಹಾಗು ಹುಚ್ಚೇಗೌಡರ ಕಿವಿ, ಭುಜಕ್ಕೆ ಪೆಟ್ಟಾಗಿದೆ. ಹಿಮ್ಸ್‌ನಲ್ಲಿ ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮೈದಾನ ಸ್ವಚ್ಛಗೊಳಿಸಲು ಜಿಲ್ಲಾಧಿಕಾರಿ ಸೂಚನೆ



**ಹಾಸನ: ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಂಗಳವಾರ ಬೆಳಿಗ್ಗೆ ನಗರದ ಸರ್ಕಾರಿ ಕಲಾ ಕಾಲೇಜು ಮೈದಾನಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಮೈದಾನದ ಹಲವು ಕಡೆಯಲ್ಲಿ ದಟ್ಟವಾಗಿ ಹುಲ್ಲು ಬೆಳೆದುಕೊಂಡು ಆಟವಾಡಲು ಅಡ್ಡಿಯುಂಟಾಗುತ್ತಿರುವ ಬಗ್ಗೆ ಹಾಗು ಸ್ವಚ್ಛತಾ ಕಾರ್ಯ ನಡೆಸುವಂತೆ ಆಟಗಾರರು ಜಿಲ್ಲಾಧಿಕಾರಿಯಲ್ಲಿ ಕೋರಿಕೊಂಡರು. ಮನವಿಗೆ ಸ್ಪಂದಿಸಿ, ಒಂದು ವಾರದೊಳಗೆ ಕ್ರೀಡಾಂಗಣ ವನ್ನು ಸ್ವಚ್ಛ ಮಾಡಿಸುವಂತೆ ಮಹಾ ನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರಿಗೆ ಸೂಚಿಸಿದರು.**

### 25 ಜನರ ಸಾವು, ಹಲವರಿಗೆ ಗಾಯ | ಬೆಳವಣಿಗೆ ಮೇಲೆ ಕಣ್ಣಿಟ್ಟಿರುವ ಭಾರತ

# ಭುಗಿಲೆದ್ದ ಹಿಂಸಾಚಾರ: ನೇಪಾಳ ಪ್ರಧಾನಿ ರಾಜೀನಾಮೆ

● ಪ್ರಜೋದಯ ವರದಿ


**ಕಠ್ಮಂಡು:** ಭ್ರಷ್ಟಾಚಾರ ನಿಯಂತ್ರಣಕ್ಕೆ ಆಗ್ರಹಿಸಿ ನೇಪಾಳದ ವಿವಿಧೆಡೆ ಯುವಕರು ನಡೆಸಿದ ಬೃಹತ್ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ 25 ಮಂದಿ ಮೃತಪಟ್ಟಿದ್ದು, ನೇಪಾಳ ಪ್ರಧಾನಿ ಕೆ.ಪಿ.ಶರ್ಮಾ ಓಲಿ ತಮ್ಮ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ.

ಓಲಿ ಅವರ ರಾಜೀನಾಮೆ ಕೂಡ ಪ್ರತಿಭಟನಾಕಾರರ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿತ್ತು. ಆದರೆ ನೇಪಾಳದಲ್ಲಿ ಪ್ರಧಾನಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದರಿಂದ ಸರ್ಕಾರ ಬೀಳುತ್ತದೆ ಎಂದರ್ಥವಲ್ಲ. ನೇಪಾಳದಲ್ಲಿ ಪ್ರಧಾನ ಮಂತ್ರಿ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿದ್ದು, ರಾಷ್ಟ್ರಪತಿ ಅವರು ಸರ್ಕಾರದ ಮುಖ್ಯಸ್ಥ ರಾಗಿದ್ದಾರೆ.

ರಾಷ್ಟ್ರಪತಿ ರಾಜೀನಾಮೆ ನೀಡುವುದರಿಂದ ಸರ್ಕಾರ ಸಂಪೂರ್ಣವಾಗಿ ಉರುಳಲಿದೆ ಎಂದು ರಾಜಕೀಯ ತಜ್ಞರು ಹೇಳಿದ್ದಾರೆ. ಕಳೆದ ಎರಡು ದಿನಗಳಿಂದ ನಡೆದ ಪ್ರತಿಭಟನೆಯಲ್ಲಿ 25 ಮಂದಿ ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆಂದು ನೇಪಾಳದ ಮಾಧ್ಯಮಗಳು ವರದಿ ಮಾಡಿವೆ.

ಭ್ರಷ್ಟಾಚಾರ ನಿಯಂತ್ರಿಸುವಂತೆ ಆಗ್ರಹಿಸಿ ಶಾಲಾ ವಿದ್ಯಾರ್ಥಿಗಳು ಸೇರಿ ಸಾವಿರಾರು ಸಂಖ್ಯೆಯಲ್ಲಿ ಯುವಕರು ದೇಶದಾದ್ಯಂತ ಜೆನ್‌ಝೀ ಬ್ಯಾನರ್ ಅಡಿಯಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ಪ್ರತಿಭಟನೆ ತೀವ್ರ ಸ್ವರೂಪ ಪಡೆದು ಕೊಳ್ಳುತ್ತಿದ್ದಂತೆ ಸರ್ಕಾರ ಸಾಮಾಜಿಕ ಜಾಲತಾಣಗಳ ಮೇಲೆ ನಿಷೇಧ ಹೇರಿತು.





ಈ ಘಟನೆ ಬಳಿಕ ಸೋಮವಾರ ಕಠ್ಮಂಡು ಸೇರಿ ನೇಪಾಳದೆಲ್ಲಡೆ ನಡೆದ ಪ್ರತಿಭಟನೆಗಳು ಹಿಂಸಾಚಾರಕ್ಕೆ ತಿರುಗಿ 20 ಮಂದಿ ಮೃತಪಟ್ಟು ನೂರಾರು ಜನರು ಗಾಯಗೊಂಡಿದ್ದರು. ಸಾಮಾಜಿಕ ಜಾಲತಾಣ ವೇದಿಕೆಗಳನ್ನು ನಿಷೇಧಿಸುವ ತನ್ನ ನಿರ್ಧಾರವನ್ನು ಹಿಂತೆಗೆದು ಕೊಂಡಿರುವುದಾಗಿ ನೇಪಾಳ ಸರ್ಕಾರ ಸೋಮವಾರ ತಡರಾತ್ರಿ ಘೋಷಿಸಿದೆ.

ಉದ್ವಿಗ್ನ ಪರಿಸ್ಥಿತಿಯನ್ನು ಶಮನಗೊಳಿಸಿ ನಿಯಂತ್ರಣಕ್ಕೆ ತರಲು ಸರ್ಕಾರವು ಸೇನೆಯನ್ನು ನಿಯೋಜಿಸಿದ್ದು ಸದ್ಯ ಪರಿಸ್ಥಿತಿ ಶಾಂತವಾಗಿದೆ. ನೇಪಾಳದಲ್ಲಿ ಹಲವು ಸರ್ಕಾರಗಳನ್ನು ಉರುಳಿಸಿದ್ದ ಹಿರಿಯ ರಾಜಕಾರಣಿ ಕೆ.ಪಿ. ಶರ್ಮಾ ಓಲಿ 2024ರಲ್ಲಿ ಮೂರನೇ ಬಾರಿಗೆ ಅಧಿಕಾ ರಕ್ಕೆ ಬಂದಾಗ ದೇಶಕ್ಕೆ ರಾಜಕೀಯ ಸ್ಥಿರತೆಯ ನಿರೀಕ್ಷೆ ಮೂಡಿಸಿದ್ದರು. ಆದರೆ, ಕೆಲವೇ ತಿಂಗಳುಗಳಲ್ಲಿ ಅದು ಹುಸಿಯಾಯಿತು. ಚೀನಾದ ಅಭಿಮಾನಿ ಹಾಗು ಆ ರಾಷ್ಟ್ರ ನಿಲುವಿನ ಬದ್ಧ ರಾಜಕಾರಣಿ ಎಂದೇ ಗುರುತಿಸಿಕೊಂಡಿದ್ದ ಓಲಿ ಅವರು ಭ್ರಷ್ಟಾಚಾರ ವಿರುದ್ಧದ ಹೋರಾಟ ಮತ್ತು ಸಾಮಾಜಿಕ ಜಾಲತಾಣಗಳ ಮೇಲಿನ ನಿಷೇಧದ ವಿರುದ್ಧ ಭಾರಿ ಪ್ರತಿಭಟನೆ ನಡುವೆ ರಾಜೀನಾಮೆ ನೀಡ ಬೇಕಾಯಿತು.

73 ವರ್ಷದ ಓಲಿ ಅವರ ರಾಜೀನಾಮೆಯಿಂದಾಗಿ ಕಳೆದ 17 ವರ್ಷಗಳಲ್ಲಿ 14 ಸರ್ಕಾರಗಳನ್ನು ಕಂಡ ದೇಶವನ್ನು ಮತ್ತೊಮ್ಮೆ ರಾಜಕೀಯ ಅಸ್ಥಿರತೆಯತ್ತ ದೂಡಿದೆ. ಸಿಪಿಎನ್ (ಯುಎಂಎಲ್) ಪಕ್ಷದ ಅಧ್ಯಕ್ಷರಾದ ಓಲಿ 2024ರ ಜುಲೈನಲ್ಲಿ ತಮ್ಮ ರಾಜಕೀಯ ಮಿತ್ರ ಪುಷ್ಪ ಕಮಲ್ ದಹಲ್ (ಪ್ರಚಂಡ) ಅವರನ್ನು ಬಿಟ್ಟು, ಹಿಂದಿನ ರಾಜಕೀಯ ಶತ್ರು ಶೇರ್ ಬಹದ್ದೂರ್ ದೇವುಬಾ ನೇತೃತ್ವದ ನೇಪಾಳಿ ಕಾಂಗ್ರೆಸ್ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡು ಅಧಿಕಾರಕ್ಕೆ ಬಂದರು.

**ಕಳವಳ ವ್ಯಕ್ತಪಡಿಸಿದ ಭಾರತ**

**ನವದೆಹಲಿ:** ನೇಪಾಳದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ಹಿಂಸಾಚಾರಕ್ಕೆ ತಿರುಗಿದ್ದು, ಯುವಕರು ಪ್ರಾಣ ಕಳೆದುಕೊಂಡಿರುವ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ. ಜೊತೆಗೆ ಶಾಂತಿಯುತ ರೀತಿಯಲ್ಲಿ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅಲ್ಲಿನ ಸರ್ಕಾರ ಕ್ರಮ ತೆಗೆದುಕೊಳ್ಳುವ ವಿಶ್ವಾಸವಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ನೇಪಾಳದಲ್ಲಿನ ಬೆಳವಣಿಗೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಹಿಂಸಾಚಾರದಲ್ಲಿ ಯುವಕರು ಮೃತಪಟ್ಟಿರುವುದಕ್ಕೆ ತೀವ್ರ ದುಃಖಿತರಾಗಿದ್ದೇವೆ. ಗಾಯಾಳುಗಳು ಆದಷ್ಟು ಬೇಗ ಚೇತರಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆಂದು ವಿದೇಶಾಂಗ ಸಚಿವಾಲಯ ಹೇಳಿದೆ. ಕಠ್ಮಂಡು ಸೇರಿ ನೇಪಾಳದ ಹಲವು ನಗರಗಳಲ್ಲಿ ಕರ್ಫ್ಯೂ ವಿಧಿಸಿ ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ನೇಪಾಳದಲ್ಲಿರುವ ಭಾರತೀಯ ಪ್ರಜೆಗಳು ಎಚ್ಚರಿಕೆಯಿಂದ ಇರುವಂತೆ ಮತ್ತು ನೇಪಾಳದ ಅಧಿಕಾರಿಗಳು ಹೊರಡಿಸಿದ ಕ್ರಮಗಳು ಮತ್ತು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ವಿದೇಶಾಂಗ ಸಚಿವಾಲಯ ಪ್ರಕಟಣೆ ಯಲ್ಲಿ ತಿಳಿಸಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019